REPORT RESUMES

ED 010 344 48
READING MATERIAL IN KANNADA, SECTION II.
BY- KRISHNAMURTHI, M.G. MCCORMACK, W.
UNIVERSITY OF WISCONSIN, MADISON
REPORT NUMBER NDEA-VI-266-2 PUB DATE 64
EDRS PRICE MF-$0.27 HC-$5.84 146P.

DESCRIPTORS- *KANNADA, *LANGUAGE GUIDES, *LANGUAGES, *READING MATERIALS, MADISON, WISCONSIN

THIS PUBLICATION IS THE SECOND OF A THREE-VOLUME SERIES (ED 010 343 TO ED 010 345) COVERING A VARIETY OF READING MATERIALS IN KANNADA, A PRINCIPAL LANGUAGE OF THE MYSORE STATE IN INDIA. INCLUDED IN VOLUME 2 ARE (1) BIBLIOGRAPHICAL SKETCHES OF PROMINENT INDIVIDUALS IN MYSORE (CONTINUED FROM VOLUME 1), (2) SELECTIONS FROM MODERN KANNADA WRITINGS AND BIOGRAPHIES OF AUTHORS, AND (3) CLASSICAL KANNADA POETRY IN MODERN KANNADA TRANSLATION. THE MATERIALS ARE PRESENTED IN THE KANNADA LANGUAGE. (JH)

Reading Material in Kannada

Section II

pp 383-526

(a) Biographical Sketches (continued)
(b) Biographies of writers
(c) Selections from Modern Kannada writers
(d) Classical Kannada poetry in Modern Kannada translation

ಪುರಂಧರದಾಸ 1484 - 1564

ಕೆಲವು ಪಂಡಿತರ ಪ್ರಕಾರ ಇಂಡಿಯಾಕ್ಕೆ ಮುಸಲ್ಮಾನರು ಬರಲಿಕ್ಕೆ ಮುಂಚೆ ಉತ್ತರ ಮತ್ತು ದಕ್ಷಿಣ ಇಂಡಿಯಾದ ಸಂಗೀತ ಪದ್ಧತಿಗಳು ಒಂದೇ ಆಗಿದ್ದುವು. ಮುಸಲ್ಮಾನರು ಉತ್ತರ ಇಂಡಿಯಾದ ಅನೇಕ ಭಾಗಗಳನ್ನು ಗೆದ್ದ ಮೇಲೆ ಉತ್ತರ ಮತ್ತು ದಕ್ಷಿಣ ಇಂಡಿಯಾದ ಸಂಗೀತ ಪದ್ಧತಿಗಳು ಬೇರೆ ಬೇರೆ ಆದುವು.

ದಕ್ಷಿಣ ಇಂಡಿಯಾದ ಸಂಗೀತವನ್ನು ಕರ್ನಾಟಕ ಸಂಗೀತ ಎಂದು ಕರೆಯುತ್ತಾರೆ.

ಏಕೆಂದರೆ ಕರ್ನಾಟಕದ ಸಂಗೀತಗಾರರು ದಕ್ಷಿಣ ಇಂಡಿಯಾದ ಬೇರೆಯ ಸಂಗೀತಗಾರರಿಗಿಂತ ಮುಂಚೆ ಸಂಗೀತ ಸಂಪ್ರದಾಯಕ್ಕೆ ಗಮನ ಕೊಟ್ಟರು. ಅಂತಹ ಸಂಗೀತಗಾರರಲ್ಲಿ ಪುರಂಧರ ದಾಸರು ಮೊದಲನೆಯವರು.

ಪುರಂಧರ ದಾಸರ ತಂದೆ ವರದಪ್ಪ ನಾಯಕರು ರತ್ನಗಳ ವ್ಯಾಪಾರಿಯಾಗಿದ್ದರು. ಕೆಲವರ ಪ್ರಕಾರ ಅವರ ಊರು ಹಂಪೆಯ ಹತ್ತಿರ ಇರುವ ಪುರಂಧರ ಗಡ. ಮತ್ತೆ ಕೆಲವರ ಪ್ರಕಾರ ಅವರು ಪುಣೆಯ ಹತ್ತಿರ

ಇರುವ ಪುರಂಧರ ಗಡದಲ್ಲಿ ಇದ್ದರು. ಅವರು ತಮ್ಮ ಗಂಡು ಮಗನಿಗೆ ಶ್ರೀನಿವಾಸ ಎಂದು ಹೆಸರು ಕೊಟ್ಟರು. ಮಗನಿಗೆ ಸಂಸ್ಕೃತ, ಕನ್ನಡ ಮತ್ತು ಸಂಗೀತ ಕಲಿಸಿದರು. ಅವನಿಗೆ ಹದಿನಾರು ವರ್ಷವಾದಾಗ ಮದುವೆ ಮಾಡಿದರು.

ಶ್ರೀನಿವಾಸ ನಾಯಕನಿಗೆ ಇಪ್ಪತ್ತು ವಯಸ್ಸಾದಾಗ ಅವನ ತಂದೆತಾಯಿಗಳು ಕಾಲವಾದರು. ಶ್ರೀನಿವಾಸ ನಾಯಕ ತಂದೆಯ ರತ್ನದ ವ್ಯಾಪಾರವನ್ನು ಮುಂದುವರಿಸಿ ಬಹಳ ದೊಡ್ಡ ಸಾಹುಕಾರನಾದ. ಅವನನ್ನು ಜನರು

ವ್ಯಾಪಾರಿಗಳು "ನವಕೋಟಿ ನಾರಾಯಣ" ಎಂದು ಕರೆದರು. ಆದರೆ ಹಣ ಹೆಚ್ಚಿದ ಹಾಗೆ ಅವನ ಆಶೆ ಕೂಡ ಹೆಚ್ಚಿತು.

ಶ್ರೀನಿವಾಸ ನಾಯಕ ತನ್ನ ಹಣವನ್ನೆಲ್ಲ ದಾನಮಾಡಿ ಪುರಂಧರದಾಸರಾದ ಬಗ್ಗೆ ಒಂದು ಕತೆಯಿದೆ. ಒಂದು ದಿನ ಒಬ್ಬ ಬ್ರಾಹ್ಮಣ ಶ್ರೀನಿವಾಸ ನಾಯಕನ ಅಂಗಡಿಗೆ ಹೋದ. ನಾನು ಮಗನ ಮುಂಜಿ ಮಾಡಬೇಕು, ನೀವು ಹಣ ಸಹಾಯ ಮಾಡಿ ಎಂದು ಕೇಳಿದ. ಹಿಂದೂ ಸಂಪ್ರದಾಯದ ಪ್ರಕಾರ ಬ್ರಾಹ್ಮಣ ಮಗನ ಮುಂಜಿಗೆ ಸಹಾಯ

ಕೇಳಿದರೆ ಇಲ್ಲ ಎಂದು ಹೇಳಬಾರದು.

ಆದರೆ ಶ್ರೀನಿವಾಸ ಸಾಂತುಕನಿಗೆ ಬ್ರಾಹ್ಮಣನಿಗೆ

ಹಣ ಕೊಡಲಿಕ್ಕೆ ಇಷ್ಟವಿರಲಿಲ್ಲ. ಆದ್ದರಿಂದ

ಬ್ರಾಹ್ಮಣನಿಗೆ ನಾಳೆ ಬಾ ಎಂದು ಹೇಳಿದರು.

ಹೀಗೆ ಕೆಲವು ದಿನಗಳು ಬ್ರಾಹ್ಮಣ ಬಂದಾಗ

ನಾಳೆ ಬಾ ಎಂದು ಹೇಳಿದರು. ಬ್ರಾಹ್ಮಣನಿಗೆ

ಬೇಜಾರಾಗಿ ಸಾಂತುಕರ ಮನೆಗೆ ಹೋಗಿ

ಅವರ ಹೆಂಡತಿಯು ಸಹಾಯ ಕೇಳಿದ.

ಅವಳು ತನ್ನ ಮೂಗಿನ ಒಂದು ಒಡವೆಯನ್ನು

ಅವನಿಗೆ ಕೊಟ್ಟಳು.

ಬ್ರಾಹ್ಮಣನಿಗೆ ಬಹಳ ಸಂತೋಷ-

- ಹಾಯಿತು. ಒಡವೆಯನ್ನು ಮಾರಲಕ್ಕೆ ಅವನು ನಾಯಕರ ಅಂಗಡಿಗೆ ಹೋದ. ನಾಯಕನಿಗೆ ಅದು ತನ್ನ ಹೆಂಡತಿಯ ಒಡವೆ ಎಂದು ತಿಳಿಯಿತು. ಮನೆಗೆ ಹೋಗು, ನನ್ನ ಹೆಂಡತಿಯು ಮೂಗಿನ ಒಡವೆಯನ್ನು ತೆಗೆದು-

-ಕೊಂಡು ಬಾ ಎಂದು ಒಬ್ಬ ಆಳಿಗೆ ಹೇಳಿದ.

ನಾಯಕನ ಹೆಂಡತಿ ಸರಸ್ವತಿ-

- ಬಾಯಿಗೆ ಹೆದರಿಕೆ ಉಂಟಾಯಿತು. ಅವಳು ವಿಷ ಕುಡಿಯಲಕ್ಕೆ ಸಿದ್ಧಳಾದಳು. ಆದರೆ ವಿಷ ಕುಡಿಯಲಕ್ಕೆ ಹೋದಾಗ ಮೇಲಿಂದ ಒಂದು

ಒಡವೆ ಬಟ್ಟಲನೊಳಕ್ಕೆ ಬಿತ್ತು. ಅದು ಅವಳು ಬ್ರಾಹ್ಮಣನಿಗೆ ಕೊಟ್ಟ ಒಡವೆಯ ಹಾಗೆ ಇತ್ತು. ಅದನ್ನು ಅಳಗೆ ಕೊಟ್ಟಳು. ಅದನ್ನು ನೋಡಿದ ಕೂಡಲೆ ನಾಯಕನಿಗೆ ಆಶ್ಚರ್ಯವಾಯಿತು. ಏಕೆಂದರೆ ಅವನ ಹೆಂಡತಿಯ ಒಡವೆಯಂತಹ ಒಡವೆ ಆ ಊರಿನಲ್ಲಿ ಇರಲಿಲ್ಲ. ಕೂಡಲೇ ಮನೆಗೆ ಹೋದ.

ಸರಸ್ವತಿಬಾಯಿ ನಡೆದ ವಿಷಯ - ವನ್ನೆಲ್ಲ ಗಂಡನಿಗೆ ಹೇಳಿದಳು. ನಾಯಕ ಬ್ರಾಹ್ಮಣನನ್ನು ಹುಡುಕಲಿಕ್ಕೆ ಆಳುಗಳನ್ನು ಕಳಿಸಿದ. ಆದರೆ ಬ್ರಾಹ್ಮಣ ಸಿಕ್ಕಲಿಲ್ಲ.

ನಾಯಕ, ತನಗೆ ಸರಿಯಾದ ದಾರಿ ತೋರಿಸಲಿಕ್ಕೆ ದೇವರು ಬ್ರಾಹ್ಮಣನ ಆಕಾರದಲ್ಲಿ ಬಂದ, ತನ್ನ ಜೀವನದ ಮೂವತ್ತು ವರ್ಷಗಳನ್ನು ಹಾಳು ಮಾಡಿದೆ ಎಂದು ತಿಳಿದ. ಹಣವನ್ನೆಲ್ಲ ದಾನ ಮಾಡಿ ತೀರ್ಥಯಾತ್ರೆ ಹೋದ. ಈ ಕತೆಯಲ್ಲಿ ಎಷ್ಟು ದಿನ, ಎಷ್ಟು ಸುಳ್ಳು ಸರಿಯಾಗಿ ಗೊತ್ತಿಲ್ಲ. ಆದರೆ ದಾಸರು ಒಂದು ಹಾಡಿನಲ್ಲಿ ತಾವು ದಾಸರಾಗಲಿಕ್ಕೆ ತಮ್ಮ ಹೆಂಡತಿ ಕಾರಣ ಎಂದು ಬರೆದಿದ್ದಾರೆ. ಆದ್ದರಿಂದ ಕತೆಯಲ್ಲಿ ಸ್ವಲ್ಪ ಭಾಗ ದಿಟವಿರಬೇಕು.

1525 ರಲ್ಲಿ ನಾಯಕರು ಮಧ್ವಾಚಾರ್ಯರ ಶಿಷ್ಯರು ಸ್ಥಾಪಿಸಿದ ದಾಸಕೂಟಕ್ಕೆ ಸೇರಿದರು. ಅವರಿಗೆ ಪುರಂಧರದಾಸ ಎಂದು ಹೆಸರಾಯಿತು. ದಾಸರು ಹಿಂದೂ ಪುರಾಣ ಮತ್ತು ಉಪನಿಷತ್ತುಗಳ ತತ್ವಗಳು ಸಾಮಾನ್ಯ ಜನರಿಗೆ ತಿಳಿಯುವ ಹಾಗೆ ಬಹಳ ಹಾಡುಗಳನ್ನು ಬರೆದಿದ್ದಾರೆ. ಅವರು ಬರೆದ ಹಾಡುಗಳೆಲ್ಲ ಸಂಗ್ರಹವಾಗಿಲ್ಲ. ಅವರ ಹಾಡುಗಳಿಗೆ ದೇವರ ನಾಮಗಳು ಅಥವಾ ದಾಸರ ಪದಗಳು ಎಂದು ಹೆಸರು. ಅವನ್ನು ದಕ್ಷಿಣ ಇಂಡಿಯಾದ ಎಲ್ಲ ಕಡೆಗಳಲ್ಲಿ ಹಾಡುತ್ತಾರೆ.

ಸಂಗೀತ ಕಲಿಯಲಿಕ್ಕೆ ಪಾಠಗಳನ್ನು ಬರೆದವರಲ್ಲಿ ಪುರಂದರದಾಸರು ಮೊದಲನೆಯವರು. ಈ ಕಾರಣದಿಂದ ಇವರನ್ನು ಕರ್ನಾಟಕ ಸಂಗೀತದ ಆದಿಗುರು, ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆಯುತ್ತಾರೆ. ದಕ್ಷಿಣ ಇಂಡಿಯಾದ ಅನೇಕ ಕಡೆಗಳಲ್ಲಿ ಇವರು ರಚಿಸಿದ ಹಾಡುಗಳ ಸಹಾಯದಿಂದ ಸಂಗೀತ ಕಲಿಸುತ್ತಾರೆ.

ದಾಸರು ಅನೇಕ ವರ್ಷಗಳು ಹಂಪೆಯಲ್ಲಿ ಇರುವ ಒಂದು ಮಂಟಪದಲ್ಲಿ ವಾಸಿಸಿದರು ಎಂದು ಹೇಳುತ್ತಾರೆ.

ಅವನ್ನು ದಾಸಮಂಚದ ಎಂದು ಈಗ ಕೂಡ ಕರೆಯುತ್ತಾರೆ. ಸಾಂಯಲಕ್ಕೆ ಕೆಲವು ವರ್ಷಗಳ್ಳ ಮುಂಚೆ ದಾಸರು ಸನ್ಯಾಸಿಗಳಾದರು. ಅವರು 1564 ನೆಂಯ ವರ್ಷ ಜನವಂ ತಿಂಗಳು ಎರಡನೆ ತಾರೀಖು ಕಾಲವಾದರು.

ಆಭರಣ ಒಡವೆ }	Jewellery
ತಾರೀಕು	Date
ತೀರ್ಥಯಾತ್ರೆ	Piligrimage
ದಾಸ ಕೂಟ	Sect of ascetics
ದಾನ	Charity
ದಿಟ	Truth
ದೇವರ ನಾಮ	Devotional song
ಪದ್ಧತಿ	Style
ಪಿತಾಮಹ	Grand Father
ಮುಸಲ್ಮಾನ	Muslim
ಮುಂದುವರೆಸು	Continue
ವಿಷ	Poison

ವ್ಯಾಪಾರಿ	Merchant, businessman.
ಸಿದ್ಧ	Ready, prepared.
ಸಂಗ್ರಹ	Anthology

ವೀಣೆ ಶೇಷಣ್ಣ, 1850 - 1926.

ಈ ಶತಮಾನದ ಮೊದಲನೆ ಭಾಗದಲ್ಲಿ ದಕ್ಷಿಣ ಇಂಡಿಯಾದಲ್ಲಿ ಮೂರು ಜನ ಶ್ರೇಷ್ಠಯ ವೀಣಾ ವಾದಕರಿದ್ದರು. ಅವರು ಆಂಧ್ರದ ವೆಂಕಟರಮಣ ದಾಸರು, ಸಂಗಮೇಶ್ವರ ಶಾಸ್ತ್ರಿಗಳು ಮತ್ತು ಮೈಸೂರಿನ ಶೇಷಣ್ಣನವರು.

ಶೇಷಣ್ಣನವರು 1850 ರಲ್ಲಿ ಮೈಸೂರಿನ ಹಿಂದು ಮಾಧ್ವ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದರು. ಅವರದು ಸಂಗೀತಗಾರರ ಮನೆತನ. ಅವರ ತಂದೆ ಚಿಕ್ಕರಾಮಪ್ಪನವರು ಮೈಸೂರಿನ ಅರಮನೆಯಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು.

ಶೇಷಣ್ಣನವರ ಸಂಗೀತ ವಿದ್ಯಾಭ್ಯಾಸ ಬಹಳ ಚಿಕ್ಕ ವಯಸ್ಸಿನಲ್ಲಿ ಶುರುವಾಯಿತು. ಅವರಿಗೆ ಎಂಟು ವರ್ಷವಾಗಿದ್ದಾಗ ಮೈಸೂರು ಮಹಾರಾಜರಿಂದ ಬಹುಮಾನ ಸಿಕ್ಕಿತು.

ಆದರೆ ಶೇಷಣ್ಣನವರು ಹುಡುಗರಾಗಿದ್ದಾಗ ಅವರ ತಂದೆ ಕಾಲವಾದರು. ತಂದೆ ಸತ್ತಮೇಲೆ ಅವರು ಮೈಸೂರು ಸದಾಶಿವರಾಯರು ಮತ್ತು ವೆಂಕಟಸುಬ್ಬಯ್ಯನವರ ಹತ್ತಿರ ಸಂಗೀತ ಕಲಿತರು. ಇಪ್ಪತ್ತನೆಂಟು ವಯಸ್ಸಿನಲ್ಲಿ ದಕ್ಷಿಣ ಇಂಡಿಯಾದಲ್ಲಿ ಪ್ರವಾಸಮಾಡಿ ಎಲ್ಲ ಭಾಗಗಳ ಸಂಗೀತ-

-ಗಾರರ ಪರಿಚಯ ಮಾಡಿಕೊಂಡರು. ಪ್ರವಾಸ ಮುಗಿಸಿ ಮೈಸೂರಿಗೆ ಬಂದ ಮೇಲೆ ಮಹಾರಾಜರು ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಕ ಮಾಡಿದರು. ಕೆಲವು ವರ್ಷಗಳಾದ ಮೇಲೆ ಗುಜರಾತಿನಲ್ಲಿರುವ ಬರೋಡದ ರಾಜ ಗಾಯಕವಾಡರು ಶೇಷಣ್ಣನವರನ್ನು ಬರೋಡಕ್ಕೆ ಆಹ್ವಾನಿಸಿದರು. ಅವರ ವೀಣಾವಾದನವನ್ನು ಮೆಚ್ಚಿ ಅವರಿಗೆ ಬಹುಮಾನಗಳನ್ನು ಕೊಟ್ಟರು.

ಶೇಷಣ್ಣನವರ ವೀಣಾವಾದನದಲ್ಲಿ

ಮಾಧುರ್ಯ ಮತ್ತು ಗಂತು ಮುಖ್ಯ. ಅವರು ಪಿಂಟಾನೆಗೂ ಕೂಡ ಬಾಂಡುತ್ತಿದ್ದರು. ಅವರು ಅನೇಕ ಹಾಡುಗಳನ್ನು ಬರೆದಿದ್ದಾರೆ. ಅವುಗಳಲ್ಲೆಲ್ಲ ಅವರ ಸಂಗೀತ ಪಾಂಡಿತ್ಯ ಕಂಡುಬರುತ್ತದೆ. ಸಾಂಬುವವರಿಗೂ ಶೇಷಣ್ಣನವರು ಮೈಸೂರಿನ ಆಸ್ಥಾನ ವಿದ್ವಾಂಸರಾಗಿದ್ದರು. ಇಂಡಿಯಾದ ಸಂಗೀತಗಾರರು ಮತ್ತು ಕೆಲವು ಪಾಶ್ಚಿಮಾತ್ಯ ಸಂಗೀತಗಾರರು ಅವರಿಗೆ ಬಹಳ ಗೌರವ ಕೊಡುತ್ತಿದ್ದರು. ಅವರಿಗೆ "ವೈಣಿಕ ಶಿಖಾಮಣಿ" ಎಂದು ಬಿರುದಿತ್ತು.

ಮೈಸೂರಿನ ಕೀರ್ತಿಯನ್ನು ದೇಶದ ಕಡೆ ಹಬ್ಬಿಸಿದವರಲ್ಲಿ ಶೇಷಣ್ಣನವರು ಮುಖ್ಯರಾದವರು. ಅವರು 1926ರ ಜುಲೈ 25ನೇ ತಾರೀಕು ಕಾಲವಾದರು.

ಆಂಧ್ರ	Andhra province where Telugu is the regional language.
ಆಸ್ಥಾನ ವಿದ್ವಾಂಸ	Court musician.
ಆಹ್ವಾನಿಸು	To invite
ನಯ	Nicety
ನೇಮಕ ಮಾಡು	Appoint (To name)
ಪಾಂಡಿತ್ಯ	Scholarship
ಪಾಶ್ಚಿಮಾತ್ಯ	Western
ಪ್ರವಾಸ	Tour
ಮಹಾರಾಜ	His Highness the King.
ಮಾಧುರ್ಯ	Sweetness
ವೀಣಾ ವಾದಕ	One who plays the string instrument, Veena.
ಶಿಖಾಮಣಿ	Gem.

ಮುರಾರಜಿ ದೇಸಾಯಿ, 1896-

ಮುರಾರಜಿ ದೇಸಾಯಿಯವರು ಗುಜರಾತ್ ದೇಶದ ಬುಲ್ಸಾರಿನಲ್ಲಿ 1896 ರಲ್ಲಿ ಹುಟ್ಟಿದರು. ಇವರ ವಿದ್ಯಾಭ್ಯಾಸ ಬುಲ್ಸಾರ್ ಮತ್ತು ಮುಂಬೈಗಳಲ್ಲಿ ನಡೆಯಿತು. 1918 ರಲ್ಲಿ ಮುಂಬೈ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದರು. ಆದರೆ 1931 ರಲ್ಲಿ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಕ್ಕೆ ಶುರುಮಾಡಿದರು. ಬಹಳ ವರ್ಷಗಳ ಕಾಲ ಗುಜರಾತ್ ಕಾಂಗ್ರೆಸ್ ಕಾರ್ಯದರ್ಶಿಗಳಾಗಿದ್ದರು.

ದೇಸಾಯಿಯವರು 1937 ರಿಂದ 1939 ರವರೆಗೆ ಮುಂಬಯಿಯ ಸಹಕಾರ, ಕೃಷಿ ಮತ್ತು ಅರಣ್ಯ ಶಾಖೆಯ ಮಂತ್ರಿಯಾಗಿದ್ದರು. 1942 ರಲ್ಲಿ ಇತರ ಕಾಂಗ್ರೆಸ್ ನಾಯಕರಂತೆ ಇವರು ಕೂಡ ಜೇಲಿಗೆ ಹೋದರು. 1946 ರಲ್ಲಿ ಮತ್ತೆ ಮುಂಬಯಿ ರಾಜ್ಯದ ಗೃಹ ಮತ್ತು ಕಂದಾಯದ ಮಂತ್ರಿಗಳಾದರು. 1952 ರಲ್ಲಿ ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳಾದರು. 1956 ರಲ್ಲಿ ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿಗಳಾದರು. 1958 ರಲ್ಲಿ ದೇಸಾಯಿಯವರು

ಭಾರತದ ಅರ್ಥ ಮಂತ್ರಿಗಳಾದರು.

1963 ರಲ್ಲಿ ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿರುವ ಹಿರಿಯ ಕಾಂಗ್ರೆಸ್ ನಾಯಕರು ಸರ್ಕಾರವನ್ನು ಬಿಟ್ಟು ಪಾರ್ಟಿ ಕೆಲಸ ಮಾಡಬೇಕೆಂದು ತೀರ್ಮಾನಿಸಿದರು. ಇದಕ್ಕೆ ಕಾಮರಾಜ್ ಸೂತ್ರ ಎಂದು ಹೆಸರು. ಏಕೆಂದರೆ ಮದ್ರಾಸ್ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕಾಮರಾಜ್‌ರವರು ಈ ಸೂತ್ರವನ್ನು ಕಾಂಗ್ರೆಸ್ ಮುಂದಿಟ್ಟರು. ಈ ತತ್ವದ ಪ್ರಕಾರ ದೇಸಾಯಿಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ದೇಸಾಯಿಯವರು ಮೊದಲಿನಿಂದ ದಕ್ಷ ಅಧಿಕಾರಿಗಳೆಂದು ಹೆಸರು ಪಡೆದಿದ್ದಾರೆ. ತಮಗೆ ಸರಿ ಎಂದು ತೋರಿದ ತತ್ವಗಳ ಪ್ರಕಾರ ಜೀವಿಸುವುದು ಅವರ ಮುಖ್ಯ ಗುಣ. ಅನೇಕ ವರ್ಷಗಳ ಆಡಳಿತದಿಂದ ಬಂದ ಅನುಭವದಿಂದ ಅವರು ಅರ್ಥಮಂತ್ರಿಗಳಾಗಿದ್ದಾಗ ಉಪಯೋಗಿಸಿದರು.

ಕಷ್ಟವಾದ ಕೆಲಸಗಳನ್ನು ನೆರವೇರಿಸುವುದು ಅವರ ಸ್ವಭಾವ. ಕೇಂದ್ರ ಸರ್ಕಾರದಲ್ಲಿ ಇರುವವರಿಗೆ ಅವರ ಸ್ಥಾನ

ಎರಡನೆಯದಾಗಿತ್ತು. ಅವರು ಮೊದಲಿಂದ ಹಿಂದಿ ಇಂಡಿಯಾದ ರಾಜ್ಯಭಾಷೆ ಆಗಬೇಕೆಂದು ವಾದಿಸುತ್ತಿದ್ದಾರೆ.

ಅನುಭವ	Experience
ಅರ್ಥ (ಮಂತ್ರಿ)	Finance (minister)
ಅರಣ್ಯ ಶಾಖೆ	Forest department
ಕಾರ್ಯದರ್ಶಿ	Secretary
ಕಂದಾಯ	Tax
ಕೃಷಿ	Agriculture
ಗೃಹ (ಮಂತ್ರಿ)	Home (minister)
ದಕ್ಷ	Efficient
ನೆರವೇರಿಸು	To fulfil
ಮುಂದಿಡು	To Place before (ಇಡು ಮುಂದೆ)
ರಾಜೀನಾಮೆ	Resignation
ರಾಷ್ಟ್ರಭಾಷೆ	National language
ವಾಣಿಜ್ಯ	Business
ಸಹಕಾರ	Co-operatives
ಸೂತ್ರ	Rule, Principle
ಸ್ಥಳ	Place

ಮೈಸೂರು ರಾಜ್ಯದಲ್ಲಿ ವ್ಯವಸಾಯ ಯೋಜನೆ.

ನಮ್ಮ ರಾಜ್ಯದಲ್ಲಿ ವ್ಯವಸಾಯ ಮಳೆಯನ್ನು ಅವಲಂಬಿಸಿದೆ. ಆದ್ದರಿಂದ ವ್ಯವಸಾಯ ಉತ್ತಮವಾಗ ಬೇಕಾದರೆ ನೀರಾವರಿಗೆ ಮುಖ್ಯತೆ ಕೊಡಬೇಕು. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 15 ಕೋಟಿ ರೂಪಾಯಿ, ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ೩೩ ಕೋಟಿ ರೂಪಾಯಿ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 40 ಕೋಟಿ ರೂಪಾಯಿ - ಈ ರೀತಿ ಸರ್ಕಾರ ನೀರಾವರಿಗೆ ಹಣ ಖರ್ಚು ಮಾಡಿದೆ.

ತುಂಗಭದ್ರಾ, ಘಟಪ್ರಭಾ ಮತ್ತು ಭದ್ರಾ ಯೋಜನೆಗಳು ದೊಡ್ಡ ನೀರಾವರಿ ಯೋಜನೆಗಳು. ಇನ್ನು ಕೆಲವು ವರ್ಷಗಳಲ್ಲಿ, ಕೃಷ್ಣಾ ಮತ್ತು ಮಲಪ್ರಭಾ ಯೋಜನೆಗಳು ಮುಗಿಯುತ್ತವೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿಯಿಂದ 17 ಲಕ್ಷ ಎಕರೆ ಜಮೀನು ಬೇಸಾಯ ಆಗುತ್ತಿತ್ತು. ಎರಡನೆ ಯೋಜನೆಯ ಕೊನೆಗೆ ಅದು ೨೦ ಲಕ್ಷ ಎಕರೆ ಆಯಿತು. ಮೂರನೆ ಯೋಜನೆಯ ಕೊನೆಗೆ ಅದು ೩೦ ಲಕ್ಷ

ಎಕರೆ ಜಮೀನು ಆಗಬಹುದು.

ಒಳ್ಳೆಯ ಬೀಜ, ರಾಸಾಯನಿಕ ಗೊಬ್ಬರ, ಬೆಳೆಗಳ ರೋಗಗಳ ನಿರೋಧ, ಯಂತ್ರಗಳ ಉಪಯೋಗ – ಇವುಗಳಿಗೆ ಸರ್ಕಾರ ದುಡ್ಡು ಖರ್ಚು ಮಾಡುತ್ತಿದೆ. ಬೇಸಾಯಗಾರರ ಆದಾಯ ಹೆಚ್ಚು ಮಾಡಲಿಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆ.

1956- 57 ರಲ್ಲಿ ಆಹಾರ ಧಾನ್ಯಗಳ ಬೆಳೆ 33 ಲಕ್ಷ ಟನ್ ಇತ್ತು. ಎರಡನೆಯ ಯೋಜನೆಯ ಕೊನೆಗೆ 39 ಲಕ್ಷ ಟನ್ ಇತ್ತು. 1962-63 ರಲ್ಲಿ 56 ಲಕ್ಷ ಟನ್ ಆಯಿತು.

ಗೇರು ಬೀಜದ ಬೆಳೆ 1956-57 ರಲ್ಲಿ 8000 ಟನ್ ಇತ್ತು. 1962-63 ರಲ್ಲಿ 12,000 ಟನ್ ಆಯಿತು.

29-9-1963 ರ ಸಂಯುಕ್ತ ಕರ್ನಾಟಕ[1] ದ ಆಧಾರದ ಮೇಲೆ.

[1] ಸಂಯುಕ್ತ ಕರ್ನಾಟಕ ಒಂದು ದಿನಪತ್ರಿಕೆ. (daily newspaper).

ಅವಲಂಬಿಸು	Depend
ಉತ್ತಮ ಮಾಡು	Improve
ಎಕರೆ	Acre
ಕೋಟಿ	Crore
ಗೇರು ಬೀಜ	Cashew
ಗೊಬ್ಬರ	Manure
ಜಮೀನು	Land
ತುಂಗಭದ್ರಾ ಘಟಪ್ರಭಾ ಭದ್ರಾ ಕೃಷ್ಣಾ ಮಲಪ್ರಭಾ	Rivers
ಪಂಚ ವಾರ್ಷಿಕ	Five year
ಬೀಜ	Seed
ರಾಸಾಯನಿಕ	Chemical
ವ್ಯವಸಾಯ	Agriculture
ಯಂತ್ರ	Machine

ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿ

ಮೈಸೂರು ಸರಕಾರವು ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೆಂಗಳೂರಿನ ರೆಮ್ಕೋ (Radio and electrical manufacturing co.), ಪಿಂಗಾಣಿ ಕಾರ್ಖಾನೆ, ಸೋಪ್ ಕಾರ್ಖಾನೆ, ಹಾಸನದ ವ್ಯವಸಾಯೋಪಕರಣ ತಯಾರಿಕೆ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ - ಇವು ಸರ್ಕಾರ ನಡೆಸುವ ಕೈಗಾರಿಕೆಗಳು. ಇವುಗಳ ಜೊತೆಗೆ ಅನೇಕ ಖಾಸಗಿ ಮತ್ತು ಸಹಕಾರ ಸಂಸ್ಥೆಗಳು ರಾಜ್ಯದಲ್ಲಿ

ಪ್ರಾರಂಭವಾಗಿವೆ. ಇವುಗಳಲ್ಲಿ ಹಿರಣ್ಯಕೇಶಿ, ಪಾಂಡವಪುರ, ಕಂಪಲಿಯ ಸಕ್ಕರೆ ಕಾರ್ಖಾನೆಗಳು. ಅಮ್ಮಸಂದ್ರ, ಬಾಗಲಕೋಟೆಗಳ ಸಿಮೆಂಟ್ ಕಾರ್ಖಾನೆಗಳು, ದಾಂಡೇಲಿ ಮತ್ತು ಭದ್ರಾವತಿ ಕಾಗದದ ಕಾರ್ಖಾನೆ ಕೆಲವು. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಲಿಕ್ಕೆ ಇಂಡಸ್ಟ್ರಿಯಲ್ ಎಸ್ಟೇಟ್ ಮತ್ತು ತರಬೇತಿ ಕೇಂದ್ರ ಪ್ರಾರಂಭವಾಗಿವೆ. ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವವರಿಗೆ ಹಣ ಸಹಾಯ ಮಾಡಲಿಕ್ಕೆ ಮತ್ತು ವಸ್ತುಗಳ ಮಾರಾಟ ಮಾಡಲಿಕ್ಕೆ ಯೋಜನೆಗಳು

ಪ್ರಾರಂಭವಾಗಿವೆ.

ಎಲ್ಲ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಮತ್ತು ಖನಿಜ ಮುಖ್ಯವಾಗಿ ಬೇಕು. ಶರಾವತಿ, ತುಂಗಭದ್ರ ಮತ್ತು ಭದ್ರಾ ಯೋಜನೆಗಳು ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚು ಮಾಡುತ್ತವೆ.

ಕಳೆದ ಏಳು ವರ್ಷಗಳಲ್ಲಿ ಕೈಗಾರಿಕೆಗಳ ಉತ್ಪಾದನೆ ಎರಡರಷ್ಟು ಆಗಿದೆ. 1956 ರಲ್ಲಿ ಕೈಗಾರಿಕೆಗಳ ಉತ್ಪಾದನೆಯ ಒಟ್ಟು ಬೆಲೆ 13 ಕೋಟಿ ರುಪಾಯಿ ಇತ್ತು. 1960 ರಲ್ಲಿ 26 ಕೋಟಿ ರುಪಾಯಿ ಆಯಿತು. ಕಬ್ಬಿಣ, ಉಕ್ಕಿನ ಉತ್ಪಾದನೆ 1956-57 ರಲ್ಲಿ

134 ಲಕ್ಷ ಮೆಟ್ರಿಕ್ ಟನ್ ಇತ್ತು. 1962 ರಲ್ಲಿ 174 ಲಕ್ಷ ಮೆಟ್ರಿಕ್ ಟನ್ ಆಯಿತು. ಸಿಮೆಂಟ್ ಉತ್ಪಾದನೆ ಕೂಡ ಹೆಚ್ಚಾಗಿದೆ. 1956 ರಲ್ಲಿ ಕಾಗದದ ಉತ್ಪಾದನೆ ಕೇವಲ 7 ಸಾವಿರ ಟನ್ ಇತ್ತು. 1962 ರಲ್ಲಿ 38 ಸಾವಿರ ಮೆಟ್ರಿಕ್ ಟನ್ ಆಯಿತು.

ಕೈಗಾರಿಕೆಗಳು ಅಭಿವೃದ್ಧಿ ಆಗಬೇಕಾದರೆ ತಾಂತ್ರಿಕ ಶಿಕ್ಷಣ ಹೆಚ್ಚಾಗಬೇಕು. ಈಗ ರಾಜ್ಯದಲ್ಲಿ 10 ಇಂಜಿನಿಯರಿಂಗ್ ಕಾಲೇಜುಗಳು ಇವೆ. ಜಿಲ್ಲೆಗೆ ಒಂದು ಪಾಲಿಟೆಕ್ನಿಕ್ ಇದೆ. ಎರಡನೆಯ

ಪಂಚವಾರ್ಷಿಕ ಯೋಜನೆಗಳಲ್ಲಿ 24 ಸಾಲ

ಚರ್ಚೆಗಳು ಪ್ರಾರಂಭವಾದುವು.

23-9-1963 ರ ಸಂಯುಕ್ತ ಕರ್ನಾಟಕ ದ

[illegible].

ಅಭಿವೃದ್ಧಿ	Progress, Development.
ಉತ್ಪಾದನೆ	Production.
ಉಪಕರಣ	Implements
ಎರಡರಷ್ಟು	Twice
ಖಾಸಗಿ	Private
ಖನಿಜ	Minerals
ಕಳೆದ	Past
ತಯಾರಿಕೆ	Manufacture
ತರಬೇತಿ	Training
ಗಂಧ	Sandal wood
ಪಿಂಗಾಣಿ	Porcelain
ಪ್ರೋತ್ಸಾಹ	Encouragement
ವಿದ್ಯುಚ್ಛಕ್ತಿ	Electricity

ಕೈಗಾರಿಕೆಗಳ ತೊಂದರೆಗಳು

ಪಶ್ಚಿಮ ರಾಷ್ಟ್ರಗಳು ಕೈಗಾರಿಕೆಯಲ್ಲಿ ಕ್ರಮ ಕ್ರಮವಾಗಿ ಬೆಳೆದುವು. ಆ ರಾಷ್ಟ್ರಗಳ ಅನುಭವವನ್ನು ಬಳಸಿಕೊಂಡು ನಾವು ಅವು ಬೆಳೆದುದಕ್ಕಿಂತ ಸ್ವಲ್ಪ ಬೇಗ ಬೆಳೆಯಬಹುದು. ಆದರೆ ಅಲ್ಲಿ ನೂರು ವರ್ಷದಲ್ಲಿ ಬೆಳೆದಷ್ಟನ್ನು ನಾವು ಹತ್ತು ವರ್ಷದಲ್ಲಿ ಬೆಳೆಯಬಹುದು ಎನ್ನುವುದು ಭ್ರಾಂತಿ. ಕೈಗಾರಿಕೆ ಎಂದರೆ ಹಣ ಮಾತ್ರ ಅಲ್ಲ; ಸಾಮಗ್ರಿ, ಯಂತ್ರ, ದುಡಿಯುವ ಜನ, ನೋಡಿಕೊಳ್ಳುವ ಜನ, ಬಲ್ಲ ಜನ, ಎಲ್ಲ ಇರಬೇಕು. ನಾವು

ಸಾಮಗ್ರಿಯನ್ನು ಒದಗಿಸಬಹುದು. ಆದರೆ ಅದಕ್ಕೆ ಒಂದು ಮಿತಿ ಇದೆ.

ಯಂತ್ರಗಳನ್ನು ಹೊರಗಿಂದ ತರಬೇಕು. ಒಂದು ಭಾಗ ಇಲ್ಲದೆ ಇದ್ದರೆ ಆ ಯಂತ್ರ ಉಪಯೋಗವಿಲ್ಲ. ಯಂತ್ರಗಳನ್ನು ಹೇಗೆ ನಡೆಸಬಹುದು ಎಂದು ಬಲ್ಲ ಜನ ಈಗ ಒದಗುತ್ತಿದ್ದಾರೆ. ಎಲ್ಲ ಕೆಲಸಕ್ಕೆ ಸಾಕಷ್ಟು ಕಾಲ ಬೇಕು. ನಮ್ಮವರು ಒದಗುವವರೆಗೆ ಹೊರಗಿನ ಜನರನ್ನು ಇರಿಸಿಕೊಳ್ಳೋಣ ಎಂದರೆ ನಮ್ಮಲ್ಲಿ ನೂರಾರು ಜನಕ್ಕೆ ಕೊಡುವ ಸಂಬಳವನ್ನು ಹೊರಗಿನ ಒಬ್ಬನಿಗೆ ಕೊಡ-

-ಬೇಕಾಗುತ್ತದೆ. ಅವನಿಗೆ ರಾಜಭೋಗ ಬೇಕು. ಹೀಗೆ ನಡೆದ ಕೈಗಾರಿಕೆಯಿಂದ ನಮಗೆ ಬೇಕಾದ ಫಲ ಹೇಗೆ ಸಿಕ್ಕುತ್ತದೆ!

ಇನ್ನು ಹಣದ ಉಪಯೋಗದ, ಮೇಲ್ವಿಚಾರಣೆಯು ಬ್ಯಾಂಕು ಸಾಧಾರಣವಾಗಿ ಹಣದ ಸಹಾಯ ಮಾಡುವ ರಾಷ್ಟ್ರ ಯಂತ್ರಗಳನ್ನು ತನ್ನಿಂದ ಕೊಳ್ಳಲಿ ಎಂದು ಆಸೆ ಪಡುತ್ತದೆ. ಇದರಲ್ಲಿ ಒಂದು ರಾಷ್ಟ್ರ ಹಾಕುವ ಬೆಲೆ, ಇನ್ನೊಂದು ರಾಷ್ಟ್ರ ಹಾಕುವ ಬೆಲೆ ಬಹಳ ಬೇರೆ ಆಗಬಹುದು. ನಾವು ಯಂತ್ರಗಳನ್ನು ಮಾಡಿಕೊಳ್ಳಬಹುದು ಎಂದರೆ

ಕೆಲಸ ಎರಡು ವರ್ಷ ತಡವಾಗಬಹುದು.
ಆದರೆ ಬೆಲೆ ನಾಲ್ಕರಲ್ಲಿ ಒಂದು ಭಾಗ
ಆಗಬಹುದು. ನಮ್ಮ ವ್ಯವಹಾರದಲ್ಲಿ ಈ
ರೀತಿಯ ಮಿತ ತಪ್ಪಿಹೋಗಿದೆ. ಇಲ್ಲಿಯ
ವೆಚ್ಚದಲ್ಲಿ ಹಿಡಿತ ಸಾಲದು. ಇದಕ್ಕೆ ಒಂದು
ಕಾರಣ ನಮ್ಮ ಜನಕ್ಕೆ ಅನುಭವ ಸಾಲದು;
ಇನ್ನೊಂದು ಕಾರಣ ಅಧಿಕಾರದಲ್ಲಿ ಇರುವ-
-ವರಲ್ಲಿ ಕೆಲವರು ಅಂತೀಲಗ್ಗರು; ಮತ್ತೊಂದು
ಕಾರಣ ಯಂತ್ರಗಳು ಕೆಡುವುದು.

ಹೀಗಾಗಿ ನಮ್ಮ ರಾಷ್ಟ್ರ

ಪ್ರಾರಂಭಿಸುವ ಕೈಗಾರಿಕೆಗಳು ನಾವು ಆಶೆ
ಪಡುವಷ್ಟು ಫಲವನ್ನು ಕೊಡುತ್ತಿಲ್ಲ.

ಅಕ್ಟೋಬರ್ 1962 ರ ಜೀವನ[1] ದ
ಆಧಾರದ ಮೇಲೆ.

---

1. ಜೀವನ — ಮಾಸ ಪತ್ರಿಕೆ.
(Monthly magazine)

ಲಂಚಗಳ್ಳ	Corrupt
ಒದಗು	Available
ಬಲ್ಲ ಜನ	People who know
ಬಳಸು	Make use
ಭ್ರಾಂತಿ	Illusion
ಮಿತಿ	Limit
ರಾಜ ಭೋಗಗಳ	Royal comforts
ರಾಷ್ಟ್ರ	Nation
ಸಾಮಗ್ರಿ	Material

ನಮ್ಮ ರಾಷ್ಟ್ರದ ಭಾಷಾ ಸಮಸ್ಯೆಯಲ್ಲಿ ಕನ್ನಡದ ಸ್ಥಾನ

ಭಾಷಾನುಗುಣ ಪ್ರಾಂತಗಳು ಆದರೆ ಕನ್ನಡ ದೇಶದ ಆಡಳಿತ ಕನ್ನಡದಲ್ಲಿ ನಡೆಯುತ್ತದೆ. ರಾಷ್ಟ್ರ ಜೀವನದ ವಿವರಗಳು ಕನ್ನಡ ಜನಕ್ಕೆ ಕನ್ನಡದಲ್ಲಿ ತಿಳಿಯುತ್ತದೆ. ನಮ್ಮ ಜನ ರಾಷ್ಟ್ರ ಜೀವನದಲ್ಲಿ ಭಾಗವಹಿಸಬಹುದು, ಈ ಕಾರಣಕ್ಕಾಗಿ ನಾವು ಭಾಷಾನುಗುಣ ಪ್ರಾಂತಗಳು ಬೇಕು ಎಂದು ಕೇಳಿದೆವು.

ಆದ್ದರಿಂದ ಅಧಿಕಾರಗಳ ಅಂತಕ್ಕ -ಗಾಗಿ ಕೇಂದ್ರ ನಡೆಸುವ ಪರೀಕ್ಷೆಗಳಲ್ಲಿ ನಮ್ಮ

ಭಾಷೆಗಳಿಗೆ ಮುಖ್ಯ ಸ್ಥಾನ ಕೊಡಬೇಕು. ಇಂಗ್ಲಿಷಿನಲ್ಲಿ, ಹಿಂದಿಯಲ್ಲಿ ಒಂದೊಂದು ವೃತ್ತ ಪತ್ರಿಕೆ ಇರಬಹುದು. ಆದರೆ ಸ್ಪರ್ಧಿಯು ಯೋಗ್ಯತೆಯನ್ನು ಇಂಗ್ಲಿಷಿನ, ಹಿಂದಿಯ ಪಾಂಡಿತ್ಯದಿಂದ ಅಳೆಯಕೂಡದು. ಸ್ಪರ್ಧಿ ತಾನು ದುಡಿಯುವ ರಾಜ್ಯದ ಭಾಷೆಯಲ್ಲಿ ಪರೀಕ್ಷೆ ಕೊಡಬೇಕು, ತನ್ನ ದಕ್ಷತೆಯನ್ನು ತೋರಿಸಬೇಕು. ಹೀಗೆ ಮಾಡಿದರೆ ನಮ್ಮ ರಾಷ್ಟ್ರದಲ್ಲಿ ಐಕ್ಯತೆ ಇರುವುದಿಲ್ಲ ಎಂದು ನಮ್ಮ ನಾಯಕರು ಹೇಳುತ್ತಾರೆ. ಹೀಗೆ

ಹೇಳುವುದು ತಪ್ಪು. ರಾಷ್ಟ್ರದಲ್ಲಿ ಈಗ ಐಕ್ಯತೆ ಇದ್ದರೆ, ಇಂತಹ ಐಕ್ಯತೆ ಹಿಂದೆ ಇತ್ತು, ಮುಂದೆ ಕೂಡ ಇರುತ್ತದೆ.

ರಾಜ್ಯದ ಭಾಷೆ ಆಡಳಿತದ ಭಾಷೆ ಆದರೆ ಬೇರೆ ರಾಜ್ಯದ ಜನ ಅಲ್ಲಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ, ಬೇರೆ ರಾಜ್ಯದ ವಿದ್ಯಾರ್ಥಿಗಳು ಅಲ್ಲಿ ವಿದ್ಯೆ ಕಲಿಯಲಿಕ್ಕೆ ಆಗುವುದಿಲ್ಲ ಎಂದು ಸಾಂತುಕರು ಹೇಳುತ್ತಾರೆ.

ಈಗ ಒಂದು ರಾಜ್ಯದಲ್ಲಿ ಬೇರೆಯ ರಾಜ್ಯದ ಎಷ್ಟು ಜನ ಕೆಲಸ ಮಾಡುತ್ತಾರೆ?

ಅವರ ಸಂಖ್ಯೆ ದೇಶದ ಜನಸಂಖ್ಯೆಗಿಂತ ಬಹಳ ಕಡಿಮೆ. ಸ್ವಲ್ಪ ಜನರ ಅನುಕೂಲಕ್ಕಾಗಿ ಎಲ್ಲಾ ಜನರು ಬೇರೆ ಭಾಷೆಯನ್ನು ಉಪಯೋಗಿಸಲಿ ಎಂದು ಹೇಳುವುದು ತಪ್ಪು.

ಈಗ ಎಲ್ಲಾ ವಿಶ್ವವಿದ್ಯಾನಿಲಯಗಳು ಇಂಗ್ಲಿಷಿನಲ್ಲಿ ಪಾಠ ಕಲಿಸುತ್ತವೆ. ಆದರೆ ಒಂದು ರಾಜ್ಯದಿಂದ ಬೇರೆ ರಾಜ್ಯಕ್ಕೆ ಎಷ್ಟು ವಿದ್ಯಾರ್ಥಿಗಳು ಹೋಗುತ್ತಾರೆ ? ಇಂತಹ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಸಣ್ಣ ಸಂಖ್ಯೆಯ ಅನುಕೂಲಕ್ಕಾಗಿ ರಾಜ್ಯದ

ಮಕ್ಕಳು ತಮ್ಮ ಪಾಠಗಳನ್ನು ಬೇಗ ಜ್ಞಾಪ್ತಿಯಲ್ಲಿ ಕಲಿಯಲಿ ಎಂದು ಹೇಳುವುದು ಯಾವ ಸೀಮೆಯ ಜ್ಞಾನ?

1962, ಆಗಸ್ಟ್ ತಿಂಗಳಿನ ಜೀವನ ದ ಸಂಪಾದಕೀಯದ ಆಧಾರದ ಮೇಲೆ.

ಸಂಪಾದಕರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು.

ಆಯ್ಕೆ	Selection
ಐಕ್ಯತೆ	Unity
ಜ್ಞಾನ	Wisdom
ಪಾಂಡಿತ್ಯ	Proficiency
ಭಾಷಾಸಂಬಂಧ	Linguistic
ಯೋಗ್ಯತೆ	Merit
ವಿವರ	Detail
ದೇಶ	Country
ಸ್ಪರ್ಧಿ	Contestant

ಎಂ. ಎಸ್. ಪುಟ್ಟಣ್ಣ, 1854-1930

ಎಂ. ಎಸ್. ಪುಟ್ಟಣ್ಣನವರು 1854ನೆ ಇಸವಿಯಲ್ಲಿ ಮೈಸೂರಿನಲ್ಲಿ ಹುಟ್ಟಿದರು. ಅವರಿಗೆ ಹತ್ತು ದಿನಗಳಾಗಿದ್ದಾಗ ಅವರ ತಾಯಿ ಕಾಲವಾದರು. ಆದ್ದರಿಂದ ಅವರ ಸೋದರಮಾವ ಅವರನ್ನು ಸಾಕಿದರು. ಪುಟ್ಟಣ್ಣನವರು ರಾಜಾ ಸ್ಕೂಲಿನಲ್ಲಿ (ಈಗಿನ ಮಹಾರಾಜಾ ಕಾಲೇಜು) ಓದಿ ಎಫ್. ಎ. ಪರೀಕ್ಷೆ ಪಾಸು ಮಾಡಿದರು. ಅವರು ಬಿ. ಎ. ಪರೀಕ್ಷೆಗೆ ಓದುತ್ತಿದ್ದಾಗ ಮೈಸೂರು ದೇಶದಲ್ಲಿ ದೊಡ್ಡ ಕ್ಷಾಮ ಬಂತು. ಆದ್ದರಿಂದ 1878ರಲ್ಲಿ ಕೋಲಾರದ ಹೈಸ್ಕೂಲಿನಲ್ಲಿ ಕೆಲಸಕ್ಕೆ ಸೇರಿದರು. ಒಂದೆರಡು ವರ್ಷಗಳಾದ ಮೇಲೆ ಅವರಿಗೆ ಮಹಾರಾಜಾ ಕಾಲೇಜಿಗೆ ವರ್ಗವಾಯಿತು. ಕೆಲವು ವರ್ಷಗಳಾದ ಮೇಲೆ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮೈಸೂರ್ ಚೀಫ್ ಕೋರ್ಟಿನಲ್ಲಿ ಭಾಷಾಂತರಕಾರರಾದರು. ಆಮೇಲೆ ಕೆಲವು

ವರ್ಷ ಅಮಲ್ದಾರರಾಗಿ ಕೆಲಸ ಮಾಡಿದರು.

ಪುಟ್ಟಣ್ಣನವರು ಕನ್ನಡದಲ್ಲಿ ಬರೆಯಲು[1] ಪ್ರಾರಂಭಿಸಿದಾಗ ಕನ್ನಡದ ಸ್ಥಿತಿ ಚೆನ್ನಾಗಿರಲಿಲ್ಲ. ಕನ್ನಡವನ್ನು ಮುಂದಕ್ಕೆ ತರಲು ಕೆಲಸ ಮಾಡಿದವರಲ್ಲಿ ಪುಟ್ಟಣ್ಣನವರು ಒಬ್ಬರು. ಹಿಂದೂಚರಿತ್ರ ದರ್ಪಣ, ಹಿಂದೂ ಚರಿತ್ರ ಸಂಗ್ರಹ ಎಂಬ ಎರಡು ಇತಿಹಾಸ ಗ್ರಂಥಗಳನ್ನು ಬರೆದರು. ಹುಡುಗರ ಉಪಯೋಗಕ್ಕಾಗಿ ನೀತಿ ಚಿಂತಾಮಣಿ ಯನ್ನು ಬರೆದರು.

ಷೇಕ್ಸ್‌ಪಿಯರ್ ಕವಿಯ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದವರಲ್ಲಿ ಪುಟ್ಟಣ್ಣನವರು ಮುಖ್ಯರಾದವರು. Cymbeline ನಾಟಕವನ್ನು ಜಯಸಿಂಹ ರಾಜ ಚರಿತ್ರೆ ಎಂದೂ, King Lear ಅನ್ನು ಹೇಮಚಂದ್ರ ರಾಜ ವಿಲಾಸ ಎಂದೂ ಕನ್ನಡಕ್ಕೆ ಭಾಷಾಂತರಿಸಿದರು.

[1] ಬರೆಯಲು = ಬರೆಯಲಿಕ್ಕೆ
ಉದಕ್ಕೆ = ಅಕ್ಕೆ. ಬರೆಯುವುದಕ್ಕೆ = ಬರೆಯಲಿಕ್ಕೆ

ಕನ್ನಡದಲ್ಲಿ ಜೀವನ ಚರಿತ್ರೆಗಳನ್ನು ಬರೆದವರಲ್ಲಿ ಪುಟ್ಟಣ್ಣನವರು ಮೊದಲನೆಯವರು. ಕುಣಿಗಲು ರಾಮಾಶಾಸ್ತ್ರಿಗಳ ಚರಿತ್ರೆ, ಮಹಮದ್ ಗವಾನನ ಚರಿತ್ರೆ, ಸರ್ ಸಾಲಾರ್ ಜಂಗನ ಚರಿತ್ರೆ ಅವರು ಬರೆದ ಜೀವನ ಚರಿತ್ರೆಗಳು.

ಪುಟ್ಟಣ್ಣನವರಿಗೆ ಹೆಸರು ಬಂದಿರುವುದು ಅವರ ಮಾಡಿದ್ದುಣ್ಣೋ ಮಹಾರಾಯ, ಮುಸುಕು ತೆಗೆಯೇ ಮಾಯಾಂಗನೆ, ಹೇಟಿ ಮಾಡೇನಜ್ಜ! ಎಂಬ ಕಾದಂಬರಿಗಳಿಂದ. ಮಾಡಿದ್ದುಣ್ಣೋ ಮಹಾರಾಯ 1915 ರಲ್ಲಿ ಪ್ರಕಟವಾಯಿತು.

ಆಗಿನ ಕಾಲದಲ್ಲಿ ಬರೆಯುತ್ತಿದ್ದ ಕಾದಂಬರಿಗಳು ಬಹುಪಾಲು ಇಂಗ್ಲಿಷ್ ಕಾದಂಬರಿಕಾರ ಸ್ಕಾಟನ ಕಾದಂಬರಿಗಳ ಮಾದರಿಯ ಮೇಲೆ ಬರೆದ ಐತಿಹಾಸಿಕ ಕಾದಂಬರಿಗಳು. ಆಗಿನ ಕಾಲದಲ್ಲಿ ಬರೆದ ಸಾಮಾಜಿಕ ಕಾದಂಬರಿಗಳಲ್ಲಿ

ಪುಟ್ಟಣ್ಣನವರ ಕಾದಂಬರಿಗಳು ಮುಖ್ಯವಾದುವು.

ಪುಟ್ಟಣ್ಣನವರು ಕಾದಂಬರಿಕಾರರು ತಮ್ಮ ನಿತ್ಯ ಅನ ಜೀವನದಿಂದ ಕತೆಗಳನ್ನು ಆರಿಸಿಕೊಳ್ಳಬೇಕು, ಜನ ಆಡುವ ಭಾಷೆಯನ್ನು ಉಪಯೋಗಿಸಬೇಕು ಎಂದು ನಂಬಿದ್ದರು. ಆದ್ದರಿಂದ ಅವರ ಕಾದಂಬರಿಗಳಲ್ಲಿ ಈ ಶತಮಾನದ ಪ್ರಾರಂಭದಲ್ಲಿದ್ದ ಮೈಸೂರು ಸಮಾಜ ಮತ್ತು ಕನ್ನಡ ಭಾಷೆಯ ಪರಿಚಯವು ಚೆನ್ನಾಗಿ ಆಗುತ್ತದೆ.

ఇసవి	Christian year.
ఎఫ్. ఎ.	Fellow of arts (Sophomore)
ఐతిహాసిక	Historical
కవి	Poet
క్షామము	Famine
కోలారు	A town in one of the districts in Mysore.
నీతి	Moral
బహుపాలు	Mostly
భాషాంతరకర్త	Translator
బదిలీ	Transfer

ಮಾಡಿದ್ದುಣ್ಣೋ ಮಹಾರಾಯ ಎಂ. ಎಸ್. ಪುಟ್ಟಣ್ಣ

(ಆಧಾರ) ಪುಟ 13-15

ತನ್ನ ಮಾವನ ಪತ್ರಮೇಲೆ ಸದಾಶಿವ ದೀಕ್ಷಿತನು ಮೈಸೂರಿಗೆ ಬಂದು ಸೋದರಮಾವ [illegible] ಸಾಂಬಶಾಸ್ತ್ರಿಗೆ ಸಂಜೆ ಮಾಡಿದ ಸಂದರ್ಭವನ್ನು ತಿಳಿಸಿದನು. ಆ ದಿವಸ ಸಾಯಂಕಾಲ ಇಬ್ಬರೂ ಅರಮನೆಗೆ ಹೋಗಿ ಮಹಾರಾಜರ ಭೇಟಿ ಮಾಡಿದರು.

ದೊರೆ: ಏನು, ಶಿಡಿಲ ಮಠ. ಯಾವಾಗ ಬಂದೆ?

ಸದಾಶಿವ: ಈ ದಿನ ಬೆಳಿಗ್ಗೆ ಬಂದೆ. ನಮ್ಮ ಮಾವಂದಿರಾದ ಜೋಯಿಸರು ಕಾಲವಾದರು. ನಾನು ಹೋದಾಗ ಕಟ್ಟಕಡೆ ಇದ್ದರು. ಅವರಿಗೆ ಯಾವ ರೋಗ ಎಂದು ಗೊತ್ತಾಗಲಿಲ್ಲ. ನಾನು ಹೋದ ದಿವಸ ರಾತ್ರಿ ನನಗೆ ನಮ್ಮ ಆದಾಯ ವಿಷ್ಯವನ್ನೆಲ್ಲಾ ಹೇಳಿ "ನನ್ನ ಮನೆಯನ್ನು ನೀನು ಬಳಸಬೇಕು, ಹಂಚಿಮಾಡಿಕೊಳ್ಳು ನೀನಿದ್ದು ಮನೆಯನ್ನು

ನೋಡಿಕೋ. ಇನ್ನು ಯಾರೂ ನನಗೆ ದಿಕ್ಕಿಲ್ಲ" ಎಂದು ಹೇಳಿದರು. ಅದಾದ ಸ್ವಲ್ಪ ಹೊತ್ತಿನಲ್ಲಿ ಅವರ ಪ್ರಾಣ ಹೋಯಿತು.

ದೊರೆ: ಅಯ್ಯೋ, ನೀಲಕಂಠ ಜೋಯಿಸರು ಕಾಲವಾದರೆ?[1] ಅನೇಕ ಸಂಗತಿಗಳನ್ನು, ಜ್ಯೋತಿಷ್ಯದಲ್ಲಿ ಕೆಲವು ಗುಟ್ಟುಗಳನ್ನು ನಾನು ಅವರಿಂದ ತಿಳಿದು ಕೊಂಡೆ. ಬಹಳ ಒಳ್ಳೆಯ ಮನುಷ್ಯರು. ಅರಮನೆ ವಿದ್ವಾಂಸರ ಪಟ್ಟಿಗೆ ಅವರ ಹೆಸರನ್ನು ಸೇರಿಸಬೇಕು ಎಂದು ನನ್ನ ಮನಸ್ಸಿನಲ್ಲಿತ್ತು. ಚಾಮರಾಜ ನಗರಕ್ಕೆ ಹೋದಾಗ ಜ್ಞಾಪಕ ಬರುತ್ತಿತ್ತು, ಮೈಸೂರಿಗೆ ಬಂದಾಗ ಮರೆತು ಹೋಗುತ್ತಿತ್ತು. ನನ್ನಿಂದ ಅವರಿಗೆ ಯಾವ ಉಪಕಾರವೂ ಆಗಲಿಲ್ಲ. ಅವರ ಮನೆಯ ಸ್ಥಿತಿ ನನಗೆ ಗೊತ್ತು. ಅವರ ಮಗ ಬೆಪ್ಪ, ಬೇರೆ ಯಾರೂ ಇಲ್ಲ. ಅವರ ಮನೆಯೇ ಹಾಳಾದ

1 ಕಾಲವಾದರೆ? = ಕಾಲವಾದರೇನು?

ಹಾಗಾಯಿತು. ಶಿಥಿಲ ಮಠ, ನೀನು ಅಲ್ಲಿ ನಿಂತು ಮನೆ ನಡೆಯುವಂತೆ ಮಾಡ್ಯಯ್ತು.[2] ಬೇಕಾದಾಗ ಬಾ, ನಿನ್ನ ಸಂಬಳವನ್ನು ತೆಗೆದುಕೋ. ನನಗೂ ಜೋಯಿಸರಿಗೂ ಇದ್ದ ಸ್ನೇಹದ ಮೇಲೆ ದೃಷ್ಟಿಯಿಟ್ಟು ಈ ಮಾತನ್ನು ನಡಿಸು. ವಿದ್ವಾಂಸರು ಹಳ್ಳಿಯಲ್ಲಿ ಇರುವುದಕ್ಕೆ[3] ಅವರಿಗೆ ಮನಸ್ಸಿರುವುದಿಲ್ಲ. ಆದರೆ ಹಳ್ಳಿಯಲ್ಲಿದ್ದರೆ ನಿನ್ನ ಪಾಂಡಿತ್ಯಕ್ಕೆ ಕಡಿಮೆಯಾಗುವುದಿಲ್ಲ.

ಸದಾಶಿವ: ನಾನು ಹೇಳಿಕೊಳ್ಳಬೇಕಾದ ವಿಷಯಗಳನ್ನು ಸನ್ನಿಧಾನವೇ ಅಪ್ಪಣೆ ಮಾಡಿತು. ಅದರಂತೆ ನಡೆಯುತ್ತೇನೆ.

ಈ ರೀತಿ ಮಹಾರಾಜರ ಅಪ್ಪಣೆ ಪಡೆದು

---

[2] ಮಾಡು + ಅಯ್ತು = ಮಾಡ್ಯಯ್ತು.

[3] ಇರುವುದಕ್ಕೆ = ಇರಲಕ್ಕೆ.

ಸದಾಶಿವ ದೀಕ್ಷಿತನೂ, ವಿಶುವತಿ ಸಾಂಬಶಾಸ್ತ್ರಿಯೂ ಮನೆಗೆ ಬಂದರು. ಆಗ ದೀಕ್ಷಿತನು ತನ್ನ ತಾಯಿಗೆ ಹೇಳಿದನು: "ಅಮ್ಮಾ, ಮಾವನವರು ಕಾಲವಾದುದರಿಂದ ಅವರ ಆಸ್ತಿಗೆ ದಿಕ್ಕಿಲ್ಲ. ಮುದುಕಿಯಾದ ನಿನ್ನನ್ನು ಇಲ್ಲಿ ಬಿಟ್ಟು ನಾನು ಅಲ್ಲಿರುವುದಕ್ಕೆ ಆಗುವುದಿಲ್ಲ. ಮಹಾರಾಜರೂ ನಾವು ಸಂಜೆವಾಡಿಯಲ್ಲಿ ಇರಬಹುದು, ಸಂಬಳವನ್ನು ತೆಗೆದುಹಾಕುವುದಿಲ್ಲ ಎಂದು ಅಪ್ಪಣೆ ಕೊಟ್ಟರು. ನೀನು ಹೇಗೆ ಹೇಳಿದರೆ ಹಾಗೆ.

ಆಗ ಸಾಂಬಶಾಸ್ತ್ರಿ ಹೇಳಿದನು:

"ಅಕ್ಕ, ಸಂಜೆವಾಡಿಗೆ ಹೋಗುವುದು ಒಳ್ಳೆಯದು ಎಂದು ನನಗೆ ತೋರುತ್ತದೆ. ನೀನು ಮನಸ್ಸಿಗೆ ಬೇಜಾರು—ಮಾಡಿಕೊಳ್ಳಬೇಡ. ನಿನ್ನ ಕೈಯಲ್ಲಿ ಇನ್ನು ಮೇಲೆ ಕೆಲಸ

ಮಾಡಲು[4] ಆಗುವುದಿಲ್ಲ."

ಪಾರ್ವತಮ್ಮ: "ನೀವೆಲ್ಲಾ ಹೇಗೆ ಹೇಳಿದರೆ ಹಾಗಾಗಲಿ, ನನಗೇನು ತಿಳಿಯುತ್ತೆ? ಸಾಯುವ ಮುದುಕಿ."

ಸದಾಶಿವ ದೀಕ್ಷಿತನು ಮನೆಯನ್ನು ಆಸ್ತಿಯನ್ನು ಸೋದರಮಾವನ ವಶಕ್ಕೆ ಬಿಟ್ಟು ಎಲ್ಲರನ್ನು ಕರೆದುಕೊಂಡು ನಂಜೆವಾಡಿಗೆ ಪ್ರಯಾಣ ಮಾಡಿದನು.

---

[4] ಮಾಡಲು = ಮಾಡಲಿಕ್ಕೆ

ಅಪ್ಪಣೆ	Order
ಅರಮನೆ	Palace
ಅಯ್ಯೋ	Alas
ಆದಾಯ	Income
ಗುಟ್ಟು	Secret
ಜ್ಞಾಪಕ	Memory
ದಿಕ್ಕು	Help
ತೆಗೆದು ಹಾಕು	Remove
ಪಟ್ಟಿ	List
ಪ್ರಾಣ ಹೋಗು	Die
ಪೆದ್ದು	Stupid
ಮರೆ	Forget
ಮುದುಕಿ	Old woman
ಸಿಡಿಲು	Thunderbolt
ವೆಚ್ಚ	Expenditure
ಸನ್ನಿಧಾನ	Royal presence
ಸಂಗತಿ	Matter

ರಂಗಸ್ವಾಮಿ ಅಯ್ಯಂಗಾರ್ರು (ಶ್ರೀಸ್ವಾಮಿ), 1911-

ಶ್ರೀಸ್ವಾಮಿ ರಂಗಸ್ವಾಮಿ ಅಯ್ಯಂಗಾರ್ರ ಕಾವ್ಯನಾಮ. ಅವರು 1911 ರಲ್ಲಿ ಮೈಸೂರು ದೇಶದ ಕೋಲಾರ ಜಿಲ್ಲೆಯಲ್ಲಿರುವ ಮಾಸ್ತಿಯಲ್ಲಿ ಹುಟ್ಟಿದರು.

ಶ್ರೀಸ್ವಾಮಿಯವರ ಮೇಲೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ರ ಪ್ರಭಾವ ಹೆಚ್ಚು ಬಿದ್ದಿದೆ. ಅವರ ಮುಖ್ಯ ಕಥಾ ಸಂಗ್ರಹಗಳು *ಪುಷ್ಪಮಾಲೆ* ಮತ್ತು *ಮೋಡಗಳು*. ಇವರ ಕೆಲವು ಕತೆಗಳು ಚೆನ್ನಾಗಿವೆ. ಕತೆಯನ್ನು ಚೆನ್ನಾಗಿ ಹೇಳುವ ಶಕ್ತಿಯಿದೆ. ಆದರೆ ಒಂದೇ ರೀತಿಯ ಕತೆಗಳನ್ನು ಬರೆಯುತ್ತಾರೆ. ಮಾಸ್ತಿಯವರಂತೆ ಜೀವನದ ಬೇರೆಬೇರೆ ವಿಷಯಗಳ ವಿಚಾರ ಬರೆಯುವುದಿಲ್ಲ.

ಕಾವ್ಯನಾಮ	Pen name
ಕಥಾ ಸಂಗ್ರಹ	Collection of stories.
ಪುಷ್ಪ ಮಾಲಿ	Garland of flowers
ಮೋಡ	Cloud
ಶಕ್ತಿ	Ability

ಮುಕ್ತಿನ ದಾರಿ "ಶ್ರೀ ಸ್ವಾಮಿ.

(ನಡೆದು ಬಂದ ದಾರಿ ಸಂಪುಟ ೨ : ಪುಟ ೧೧೮-೧೧೧. ಆಧಾರ)

ಒಂದು ದಿನ ರಾಜ ಹುಕ್ಕಣ್ಣನು ತನ್ನ ತಮ್ಮ ಬುಕ್ಕಣ್ಣ ಮತ್ತು ರತ್ನಾಜಿಂತೊಡನೆ ಹಂಪೆಯ ವಿರೂಪಾಕ್ಷನ ದರ್ಶನಕ್ಕೆ ಹೊರಟನು. ತುಂಗಭದ್ರಾ ನದಿಯ ದಕ್ಷಿಣದಲ್ಲಿ ಒಂದು ಸ್ಥಳದಲ್ಲಿ ಒಂದು ಕಾಡು ಹಂದಿ ಎಡದಿಂದ ಬಲಕ್ಕೆ ಹೋಯಿತು. ಅದನ್ನೇ ಅಣ್ಣ ತಮ್ಮಂದಿರು ನೋಡುತ್ತಿರಲು[1] ದೆಹಲಿ ಸುಲ್ತಾನರ ಬಳಿ ಇದ್ದಾಗ ನಮ್ಮನ್ನು ಹಿಂದೂಗಳಾಗಿ ಉಳಿಸಿದ ವರಾಹಸ್ವಾಮಿ ಈ ದಿನ ನಮಗೆ ದರ್ಶನ ಕೊಟ್ಟಿದ್ದಾನೆ ಎಂದು ರತ್ನಾಜ ಹೇಳಿದರು.

ಇನ್ನು ಸ್ವಲ್ಪ ಮುಂದೆ ಬರಲು ಒಂದು ಬೇಟೆಯ ನಾಯಿಯನ್ನು ಅಟ್ಟಿಸಿಕೊಂಡು

[1] ನೋಡುತ್ತಿರುವಾಗ

ಹೋದುದನ್ನು ನೋಡಿದರು. ಅವರಿಗೆ ಬಹಳ ಆಶ್ಚರ್ಯವಾಯಿತು.

ಹಂಪೆಯ ವಿರೂಪಾಕ್ಷನ ದೇವಸ್ಥಾನಕ್ಕೆ ಬಂದಾಗ ಅಲ್ಲಿ ವಿದ್ಯಾರಣ್ಯರನ್ನು ನೋಡಿದರು. ವಿದ್ಯಾರಣ್ಯರ ಮೊದಲಿನ ಹೆಸರು ಮಾಧವಭಟ್ಟ ಎಂದು. ಅವರು ಮೂವರಿಗೂ ಬಾಲ್ಯದಲ್ಲಿ ಗುರುಗಳಾಗಿದ್ದರು. ಮೂವರೂ ಅವರಿಗೆ ನಮಸ್ಕರಿಸಿದರು.

ಹುಕ್ಕಣ್ಣ ದಾರಿಯಲ್ಲಿ ತಾವು ಕಂಡುದನ್ನು ವಿವರಿಸಿದರು. ವಿದ್ಯಾರಣ್ಯರು ಆ ಸ್ಥಳವೇ ಕರ್ಣಾಟಕದ ಹೊಸ ರಾಜ್ಯದ ರಾಜ್ಯಧಾನಿಯಾಗಲು ಸರಿಯಾದ ಸ್ಥಳ, ಅಲ್ಲಿ ನಿನ್ನ ರಾಜ್ಯದ ರಾಜಧಾನಿಯನ್ನು ಕಟ್ಟಿಸು, ನಾಳೆ ದಿನ ಚೆನ್ನಾಗಿದೆ,

ನಾಳೆಯಿಂದಲೇ ಕೆಲಸ ಪ್ರಾರಂಭವಾಗಲಿ, ವಿಜಯದಶಮಿಯ ದಿನ ನಿನ್ನ ಪಟ್ಟಾಭಿಷೇಕ ಹೊಸ ಅರಮನೆಯಲ್ಲಿ ನಡೆಯಲಿ, ನಿನ್ನ ಹೊಸ ರಾಜ್ಯಕ್ಕೆ ಭುವನೇಶ್ವರಿ ದೇವಿ, ಶಾರದಾ ದೇವಿಯವರು ಅನುಗ್ರಹಿಸಿದ್ದಾರೆ ಎಂದರು.

ಗುರುಗಳ ಆಶೀರ್ವಾದ ಎಂದು ಹಕ್ಕಬುಕ್ಕರು ಮತ್ತೊಮ್ಮೆ ಅವರಿಗೆ ನಮಸ್ಕಾರ ಮಾಡಿದರು.

ವಿರೂಪಾಕ್ಷೇಶ್ವರನಿಗೆ, ಪಂಪಾಂಬಿಕೆಗೆ ವಿದ್ಯಾರಣ್ಯರೇ ಮಂಗಳಾರತಿ ಮಾಡಿ ಮುಂದಿನ ಕೆಲಸದಲ್ಲಿ ಜಯವಾಗಲಿ ಎಂದು ಆಶೀರ್ವದಿಸಿದರು.

. . . .

ವಿಜಯದಶಮಿ. ಹೊಸದಾಗಿ ಕಟ್ಟಿದ ವಿದ್ಯಾನಗರದಲ್ಲಿ

ದೊಡ್ಡ ಹಬ್ಬ. ಊರನ್ನು ಚೆನ್ನಾಗಿ ಅಲಂಕಾರ ಮಾಡಿದ್ದರು. ಹಬ್ಬಕ್ಕಾಗಿ ಬೇರೆ ಬೇರೆ ದೇಶಗಳಿಂದ ಜನರು, ರಾಜರು, ಸಂಗೀತಗಾರರು, ಕವಿಗಳು, ವ್ಯಾಪಾರಿಗಳು ಬಂದಿದ್ದರು. ಹೊಸದಾಗಿ ಕಟ್ಟಿ ಅಲಂಕರಿಸಿದ ಮಹಾರಾಜ ಹುಕ್ಕನ ಅರಮನೆಯ ದರ್ಬಾರು ಮಂದಿರದಲ್ಲಿ ಬಹಳ ಜನ ಸೇರಿದ್ದರು.

ಮಹಾರಾಜ ಹುಕ್ಕ ಮೊದಲು ವಿದ್ಯಾರಣ್ಯರಿಗೆ ನಮಸ್ಕಾರ ಮಾಡಿ ಅಲಂಕರಿಸಿದ್ದ ಗುರು ಪೀಠದ ಮೇಲೆ ದಯಮಾಡಿಸಬೇಕೆಂದು ಕೇಳಿಕೊಂಡನು. ವಿದ್ಯಾರಣ್ಯ ಗುರುಗಳು ಪೀಠದ ಮೇಲೆ ಕುಳಿತ ಕೂಡಲೆ ಮಂಗಳವಾದ್ಯಗಳಾದುವು. ಮಹಾರಾಜನು ಅವರ ಪಾದಪೂಜೆ

ಮಾಡಿದನು. ಎಲ್ಲರೂ ಕರ್ಣಾಟಕ ಸಿಂಹಾಸನಾ ಸ್ಥಾಪನಾಚಾರ್ಯರಾದ ವಿದ್ಯಾರಣ್ಯರಿಗೆ ಜಯವಾಗಲಿ, ಕನ್ನಡ ನಾಡಿಗೆ ಜಯವಾಗಲಿ ಎಂದು ಕೂಗಿದರು.

ಆಮೇಲೆ ಮಹಾರಾಜ ಕೃಷ್ಣನ ಪಟ್ಟಾಭಿಷೇಕ ಪ್ರಾರಂಭವಾಯಿತು. ಸಿಂಹಾಸನ ಸಿದ್ಧವಾಗಿತ್ತು. ವಿದ್ಯಾರಣ್ಯರು ಕೃಷ್ಣನ ಕೈ ಹಿಡಿದು ಕರೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕೂರಿಸಿ ಕಿರೀಟವನ್ನು ಅವನ ತಲೆಯ ಮೇಲೆ ಇಟ್ಟರು. ಕೃಷ್ಣಾ, ನೀನು ವರಾಹಮೂರ್ತಿಯಾದ ವಿಷ್ಣುವಿನ ದಯದಿಂದ ದೊರೆಯಾದೆ. ಆದ್ದರಿಂದ ವರಾಹ ನಿನ್ನ ರಾಜ್ಯದ ಲಾಂಛನವಾಗಿರಲಿ, ವಿರೂಪಾಕ್ಷೇಶ್ವರನ ಮತ್ತು ಪಂಪಾಂಬಿಕೆಯ

ದಯದಿಂದ ನೀನು ಈ ರಾಜ್ಯದ ದೊರೆಯಾದೆ. ಇಂದಿನಿಂದ ನೀನು ಕರ್ನಾಟಕ ರಾಜ್ಯದ ದೊರೆ ಹರಿಹರದೇವ. ಕರ್ನಾಟಕ ರಾಜ್ಯ ಸೂರ್ಯಚಂದ್ರರು ಇರುವ ವರೆಗೆ ಬೆಳೆಯಲಿ ಎಂದು ಆಶೀರ್ವದಿಸಿದರು.

ಅಲ್ಲಿ ಇದ್ದ ರಾಜ ಮಹಾರಾಜರುಗಳು ಮಹಾರಾಜ ಹರಿಹರದೇವನಿಗೆ ಉಡುಗರೆಗಳನ್ನು ಕೊಟ್ಟರು.

ಬೆಟ್ಟಿ ಹೋಂದು	Pursuing, to go after.
ಅನುಗ್ರಹಿಸು	To grace (bless)
ಎಡ	Left
ಕಾಡು ಹಂದಿ	Boar
ಕಿರೀಟ	Crown (coronet)
ದಕ್ಷಿಣ	South
ದರ್ಬಾರು ಮಂದಿರ	Count hall
ದರ್ಶನ	Sight
ದೊರೆ	King
ಗುರುಪೀಠ	Seat of the teacher
ನಾಡು	Country
ಪಟ್ಟಾಭಿಷೇಕ	Crowning, Coronation.
ಪಾದಪೂಜೆ	Worship of the feet.
ಚಂಡಾಂಬಿಕೆ	Wife of Siva, Paravati.
ಬಲ	Right side

ಬಾಲ್ಯ	Childhood
ಬೇಟೆಯ ನಾಯಿ	Hunting dog.
ಶುಭಲಕ್ಷ್ಮಿ	Godden of prosperity.
ಮಂಗಳಾರತಿ	Ceremonial waving of lamps.
ಮಂಗಳ ವಾದ್ಯ	Auspicious musical instruments.
ಮೂವರು	Three (persons)
ರಾಜ್ಯಧಾನಿ	Capitol
ವಿರೂಪಾಕ್ಷೇಶ್ವರ	Lord Siva.
ವಿವರಿಸು	Describe
ಲಾಂಛನ	Standard
ವರಾಹಸ್ವಾಮಿ	Vishnu in the guise of a boar
ಶಾರದಾ ದೇವಿ	Goddess of learning

ಸ್ಥಳ	Place
ಸ್ಥಾಪನಾಚಾರ್ಯ	Founder
ಸಮ್ರಾಟ	Emperor
ಸಿಂಹಾಸನ	Throne
ಸಂಗೀತಗಾರ	Musician

ದೇವುಡು ನರಸಿಂಹ ಶಾಸ್ತ್ರಿ, 1896-

ದೇವುಡು ನರಸಿಂಹ ಶಾಸ್ತ್ರಿಗಳು 1896ರಲ್ಲಿ ಮೈಸೂರಿನಲ್ಲಿ ಹುಟ್ಟಿದರು. ಅವರದು ಪಂಡಿತ ಮನೆತನ. ಅವರ ತಂದೆ ಮೈಸೂರು ಮಹಾರಾಜರ ಅರಮನೆಯಲ್ಲಿ ವಿದ್ವಾಂಸರಾಗಿದ್ದರು. ನರಸಿಂಹ ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದಿ ತತ್ವ ಶಾಸ್ತ್ರದಲ್ಲಿ ಎಂ. ಎ. ಪಾಸು ಮಾಡಿದರು. ಕಾಲೇಜಿನಲ್ಲಿದ್ದಾಗ ಎಸ್. ರಾಧಾಕೃಷ್ಣನ್ ಅವರು ಅವರ ಗುರುಗಳಾಗಿದ್ದರು.

ಮಕ್ಕಳಿಗೆ ಕನ್ನಡದಲ್ಲಿ ಪುಸ್ತಕಗಳನ್ನು ಬರೆದವರಲ್ಲಿ ದೇವುಡು ಅವರು ಮುಖ್ಯರಾದವರು. ಮಕ್ಕಳಿಗಾಗಿ ಇವರು ಹಲವು ವರ್ಷ *ಮಕ್ಕಳ ಪುಸ್ತಕ* ಎಂಬ ಪತ್ರಿಕೆಯನ್ನು ನಡೆಸಿದರು. ಹಲವು ವರ್ಷಗಳ ಕಾಲ *ರಂಗಭೂಮಿ* ಪತ್ರಿಕೆಯ ಸಂಪಾದಕರಾಗಿದ್ದರು. ಆ ಪತ್ರಿಕೆಯಲ್ಲಿ ನಾಟಕ ಶಾಸ್ತ್ರದ ಮೇಲೆ

ಲೇಖನಗಳನ್ನು ಬರೆದರು. ಕೆಲವು ನಾಟಕಗಳನ್ನು ಬರೆದಿದ್ದಾರೆ.

ದೇವುಡು ಸಂಸ್ಕೃತ ವಿದ್ವಾಂಸರಾದ್ದರಿಂದ ಸಂಸ್ಕೃತ ಸಾಹಿತ್ಯದ ಬಗ್ಗೆ ಪುಸ್ತಕಗಳನ್ನು ಬರೆದಿದ್ದಾರೆ. ಕಾಳಿದಾಸನ ಮೇಘಸಂದೇಶದ ಮೇಲೆ ಒಂದು ಪುಸ್ತಕ ಬರೆದಿದ್ದಾರೆ. ಶಂಕರಾಚಾರ್ಯರ ಮೇಲೆ ಒಂದು ಪುಸ್ತಕ, ಹಿಂದೂ ತತ್ವ ಶಾಸ್ತ್ರದ ಮೇಲೆ ಮೀಮಾಂಸಾದರ್ಪಣ ಎಂಬ ಪುಸ್ತಕ ಬರೆದಿದ್ದಾರೆ. ಅವರ ಇತರ ಕೆಲವು ಪುಸ್ತಕಗಳು ಕರ್ನಾಟಕ ಸಂಸ್ಕೃತಿ ಮತ್ತು ಭಾರತದ ಮಹಾಪುರುಷರು.

ದೇವುಡು ಸಣ್ಣ ಕತೆಗಳು ಮತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಅವರು ಬರೆದ ಮಯೂರ ಒಂದು ಕನ್ನಡ ರಾಜಮನೆತನದ ಬಗ್ಗೆ ಬರೆದ ಐತಿಹಾಸಿಕ ಕಾದಂಬರಿ. ಮಹಾಕ್ಷತ್ರಿಯ ಮತ್ತು ಮಹಾ ಬ್ರಾಹ್ಮಣ ಎಂಬ ಎರಡು ಪೌರಾಣಿಕ ಕಾದಂಬರಿಗಳನ್ನು

ಬರೆದಿದ್ದಾರೆ. *ದೇವುಡು ಕಥೆಗಳು* ಅವರ ಸಣ್ಣ ಕಥೆಗಳ ಸಂಗ್ರಹ.

ದೇವುಡು ಅವರ ಪೌರಾಣಿಕ ಕಾದಂಬರಿಗಳಲ್ಲಿ ಮುಖ್ಯವಾಗಿ ಕಂಡುಬರುವುದು ಅವರ ಪಾಂಡಿತ್ಯ. ಇತರ ಪೌರಾಣಿಕ ಅಥವಾ ಐತಿಹಾಸಿಕ ಕಾದಂಬರಿಕಾರರಂತೆ ಕೇವಲ ಕಥೆ ಹೇಳುವುದು ಅವರ ಉದ್ದೇಶವಲ್ಲ. ಅವರ *ಮಹಾಕ್ಷತ್ರಿಯ* ಮತ್ತು *ಮಹಾಬ್ರಾಹ್ಮಣ*ದಲ್ಲಿ ಹಿಂದೂ ಧರ್ಮದ ಬಗ್ಗೆ ಚಿಂತನೆಯಿದೆ. ಅವರ ಕನ್ನಡ ಶೈಲಿ ಗಂಭೀರವಾದುದು. *ಡಾಕ್ಟರ್ ವೀಣಾ* ಎಂಬ ಸಾಮಾಜಿಕ ಕಾದಂಬರಿಯಲ್ಲಿ ಹೊಸ ತಂತ್ರಗಳನ್ನು ಪ್ರಯೋಗಿಸಿದ್ದಾರೆ. ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಕಂಡು ಬರು	Come to be known
ಕಾದಂಬರಿ	Novel
ಗಂಭೀರ	Grand, dignified.
ಚಿಂತನೆ	Contemplation, thought.
ತಂತ್ರ	Technique
ದರ್ಪಣ	Mirror
ನಾಟಕ ಶಾಸ್ತ್ರ	Dramaturgy
ಪೌರಾಣಿಕ	Mythological
ಪ್ರಯೋಗಿಸು	Experiment (V)
ಬೌದ್ಧಿಕತೆ	Intellectualism
ಮಹಾ (ಪುರುಷ)	Great (man)
ಮೀಮಾಂಸೆ	Indian philosophy
ಮಯೂರ	Peacock
ಮೇಘ ಸಂದೇಶ	Cloud message
ರಂಗಭೂಮಿ	Stage (theater)
ಶೈಲಿ	Style
ಹಿಂದೂ ಧರ್ಮ	Hinduism

ಪಂಚತಂತ್ರ ದೇವುಡು ನರಸಿಂಹ ಶಾಸ್ತ್ರಿಗಳ ಭಾಷಾಂತರದ ಆಧಾರದ ಮೇಲೆ. ಪುಟ 45-46.

ಒಂದು ಊರಿನಲ್ಲಿ ನಾಲ್ಕು ಜನ ಸ್ನೇಹಿತರಿದ್ದರು. ಅವರಲ್ಲಿ ಮೂವರು ಶಾಸ್ತ್ರವನ್ನು ಚೆನ್ನಾಗಿ ಓದಿದ್ದರು. ಆದರೆ ಅವರಿಗೆ ಬುದ್ಧಿ ಇರಲಿಲ್ಲ. ನಾಲ್ಕನೆಯವನು ಬುದ್ಧಿವಂತ, ಆದರೆ ಅವನಿಗೆ ಶಾಸ್ತ್ರ ಗೊತ್ತಿರಲಿಲ್ಲ. ಅವರು ನಾಲ್ಕು ಜನ ಒಂದು ಕಡೆ ಸೇರಿ ಯೋಚಿಸಿದರು. ನಾವು ವಿದ್ಯೆ ಕಲಿತಿದ್ದೇವೆ. ಬೇರೆ ಊರುಗಳಿಗೆ ಹೋಗಿ ರಾಜರನ್ನು ಸಂತೋಷಪಡಿಸಿ ಬಹಳ ಹಣ ಸಂಪಾದಿಸಬೇಕು ಎಂದು ಒಬ್ಬನು ಹೇಳಿದನು. ಹಾಗೇ ಆಗಲಿ ಎಂದು ಅವರು ಪ್ರಯಾಣ ಹೊರಟರು.

ಸ್ವಲ್ಪ ದೂರ ಹೋದ ಮೇಲೆ ಅವರಲ್ಲಿ

ದೊಡ್ಡವನು ನಮ್ಮಲ್ಲಿ ಇವನು ಬುದ್ಧಿವಂತ. ಆದರೆ ವಿದ್ಯಾವಂತನಲ್ಲ. ಇವನು ರಾಜರನ್ನು ಹೇಗೆ ಸಂತೋಷ ಪಡಿಸುತ್ತಾನೆ? ನಾನು ಸಂಪಾದಿಸುವ ಹಣದಲ್ಲಿ ಇವನಿಗೆ ಪಾಲು ಕೊಡುವುದಿಲ್ಲ. ಆದ್ದರಿಂದ ಇವನು ಮನೆಗೆ ಹೋಗಲಿ ಎಂದನು. ಎರಡನೆಯವನು, ನೀನು ಹೇಳುವುದು ನಿಜ. ಆದ್ದರಿಂದ ಸುಬುದ್ಧಿ, ನೀನು ಮನೆಗೆ ಹೋಗು ಎಂದನು. ಮೂರನೆಯವನು ಇದು ಸರಿಯಲ್ಲ. ಬಹಳ ಕಾಲದಿಂದ ನಾವು ನಾಲ್ಕು ಜನ ಒಟ್ಟಾಗಿದ್ದೇವೆ. ಆದ್ದರಿಂದ ಈಗ ಎಲ್ಲ ಒಟ್ಟಿಗೆ ಹೋಗೋಣ ಎಂದನು. ಹಾಗೇ ಆಗಲಿ ಎಂದು ಎಲ್ಲ ಮುಂದೆ ಹೋದರು.

ದಾರಿಯಲ್ಲಿ ಒಂದು ಕಾಡು ಇತ್ತು. ಅಲ್ಲಿ ಸಿಂಹದ ಮೂಳೆಗಳು ಬಿದ್ದಿದ್ದುವು. ಅವನ್ನು ನೋಡಿ

ಅವರಲ್ಲಿ ಒಬ್ಬನು ಇಲ್ಲಿ ಒಂದು ಪ್ರಾಣಿ ಸತ್ತು ಬಿದ್ದಿದೆ, ನಮ್ಮ ವಿದ್ಯೆಯ ಸಹಾಯದಿಂದ ಇದಕ್ಕೆ ಜೀವ ಕೊಡೋಣ. ನಾನು ಈ ಮೂಳೆಗಳನ್ನು ಸರಿಯಾಗಿ ಜೋಡಿಸುತ್ತೇನೆ ಎಂದು ಹೇಳಿ ಅವನ್ನು ಜೋಡಿಸಿ ಇಟ್ಟನು. ಎರಡನೆಯವನು ಅದಕ್ಕೆ ರಕ್ತ ಮಾಂಸಗಳನ್ನು ಬರಿಸಿದನು. ಮೂರನೆಯವನು ಅದಕ್ಕೆ ಜೀವ ಕೊಡುತ್ತೇನೆ ಎಂದು ಹೇಳಿದನು.

ಸುಬುದ್ಧಿ ಇದಕ್ಕೆ ಜೀವ ಕೊಡಬೇಡಿ, ಇದು ಸಿಂಹ, ಅದಕ್ಕೆ ಜೀವಕೊಟ್ಟರೆ ಅದು ನಮ್ಮನ್ನು ಕೊಲ್ಲುತ್ತದೆ ಎಂದು ಹೇಳಿದನು. ಮೂರನೆಯವನಿಗೆ ಸಿಟ್ಟು ಬಂತು. ಅವನು ನನ್ನ ವಿದ್ಯೆಯನ್ನು ತೋರಿಸಬೇಡ ಎಂದು ಹೇಳುತ್ತೀಯೇನು? ಎಂದನು. ಆಗ ಸುಬುದ್ಧಿ ಹಾಗಾದರೆ ಸ್ವಲ್ಪ ತಡೆ, ನಾನು ಮರವನ್ನು ಹತ್ತುತ್ತೇನೆ ಎಂದು ಹೇಳಿ ಬೇಗ ಒಂದು ಮರವನ್ನು

ಹತ್ತಿದನು.

ಆಮೇಲೆ ಮೂರನೆಯವನು ಮಂತ್ರದ ಸಹಾಯದಿಂದ ಸಿಂಹಕ್ಕೆ ಜೀವ ಕೊಟ್ಟನು. ಅದು ಅವರ ಮೇಲೆ ಬಿದ್ದು ಅವರನ್ನು ಕೊಂದಿತು. ಸಿಂಹ ಹೋದ ಮೇಲೆ ಸುಬುದ್ಧಿ ಮರದಿಂದ ಇಳಿದು ಮನೆಗೆ ಹೋದನು. ಆದ್ದರಿಂದ ವಿದ್ಯೆಗಿಂತ ಬುದ್ಧಿ ಹೆಚ್ಚು.

ಪುಟ 67 - 68

ಒಂದು ಕೊಳದ ಹತ್ತಿರ ಒಂದು ದೊಡ್ಡ ನೇರಳೆಯ ಮರ ಇತ್ತು. ಅದರಲ್ಲಿ ಜೇನುಗಳು ಗೂಡು ಕಟ್ಟಿ ಸುಖವಾಗಿದ್ದುವು. ಒಂದೊಂದು ಸಲ ಗೂಡಿನಿಂದ ಜೇನುತುಪ್ಪ ಸೋರುತ್ತಿತ್ತು. ಅದನ್ನು ಒಂದು ಇಲಿ ನೆಕ್ಕುತ್ತಿತ್ತು.

ಇಲಿಗೆ ಜೇನುತುಪ್ಪದ ರುಚಿ ಗೊತ್ತಾಯಿತು. ಅದು ವಾಸನೆಯನ್ನು ಹಿಡಿದು ಮೆಲ್ಲನೆ ಮಧ್ಯ ಇದ್ದ ಗೂಡಿಗೆ

ಹೋಯಿತು. ಅಲ್ಲಿ ಸ್ವಲ್ಪ ಹೊತ್ತು ನಿಂತು ನೋಡಿತು. ಸಣ್ಣ ನೊಣಗಳು ಬಂದು ಹೋಗುವುದನ್ನು ನೋಡಿತು. ಸರಿ, ಇಲ್ಲಿ ಇರುವುದು ಈ ಸಣ್ಣ ನೊಣಗಳು, ಇವಕ್ಕೆ ನಾನು ಏಕೆ ಹೆದರಬೇಕು ಎಂದು ಗೂಡಿನೊಳಕ್ಕೆ ನುಗ್ಗಿತು.

ಜೇನು ನೊಣಗಳು ಮೇಲಕ್ಕೆ ಹಾರಿದುವು. ಇಲಿಯು ನೊಣಗಳು ತನಗೆ ಹೆದರಿ ಹಾರಿದುವು ಎಂದು ಸಂತೋಷದಿಂದ ಜೇನು ತುಪ್ಪ ಕುಡಿಯಲು ಶುರು ಮಾಡಿತು. ಆದರೆ ನೊಣಗಳು ಹಿಂದೆ ಬಂದು ಅದನ್ನು ಮುತ್ತಿದುವು. ಮೂತಿಯಿಂದ ಬಾಲದವರೆಗೆ ಇಲಿಯನ್ನು ಚುಚ್ಚಿದುವು. ಇಲಿಗೆ ಬಹಳ ನೋವಾಯಿತು. ಇಲಿ ಮೇಲಿಂದ ಕೆಳಗೆ ಬಿತ್ತು. ಬೀಳುವಾಗ ಸೀಗೆಯ ಮುಳ್ಳುಗಳು ಅದಕ್ಕೆ ಚುಚ್ಚಿದುವು. ಇಲಿ ಸತ್ತು ಹೋಯಿತು. ಆದ್ದರಿಂದ ತನ್ನ ಜಾಗದಲ್ಲಿ ಇರುವವನನ್ನು ಶತ್ರುಗಳು ನಾಶಮಾಡಲು ಆಗುವುದಿಲ್ಲ.

ಇಲಿ	Mouse
ಚುಚ್ಚು	Pierce
ಜೋಡಿಸು	Arrange
ಜೇನು	Bee
ನುಗ್ಗು	Rush
ನೆಕ್ಕು	Lick
ನೊಣ	Fly
ನೋವು	Pain
ಗೂಡು	Nest
ಪಾಲು	Share
ಬುದ್ಧಿ	Common sense
ಬುದ್ಧಿವಂತ	Smart man
ಮಾಂಸ	Flesh
ಮುಳ್ಳು	Thorn
ಮೂಳೆ	Bone
ಮುತ್ತು	Surround
ರಕ್ತ	Blood

ರುಚಿ	Taste
ವಾಸನೆ	Smell
ಶಾಸ್ತ್ರ	Intellectual dicipline
ಸೀಗೆಯ ಮೆಳೆ	Shampoo bush
ಸೋರಲು	Trickle

ಗೊರೂರು ರಾಮಸ್ವಾಮಿ ಅಯ್ಯಂಗಾರ್, 1904-

ರಾಮಸ್ವಾಮಿ ಅಯ್ಯಂಗಾರ್ಯರು ಹಾಸನದ ಹತ್ತಿರ ಇರುವ ಗೊರೂರಿನಲ್ಲಿ ಹುಟ್ಟಿದರು. ಅವರದು ಸಾಂಪ್ರದಾಯಿಕ ಬ್ರಾಹ್ಮಣ ಮನೆತನ. ಮೈಸೂರು ದೇಶದಲ್ಲಿ ಹಳ್ಳಿಗಳಲ್ಲಿ ವಾಸಿಸುವ ಬರಹಗಾರರು ಕಡಿಮೆ. ಅವರಲ್ಲಿ ಗೊರೂರರು ಮುಖ್ಯರಾದವರು.

ಗೊರೂರರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಈಗ ಅವರು ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಸುಮಾರು ಮೂವತ್ತು ವರ್ಷಗಳಿಂದ ಕನ್ನಡದಲ್ಲಿ ಸಣ್ಣ ಕತೆಗಳು ಮತ್ತು ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ಅವರು ಜನಪದ ಗೀತೆಗಳನ್ನು ಕೂಡ ಸಂಗ್ರಹಿಸಿದ್ದಾರೆ. ಅವರ ಪುಸ್ತಕಗಳಲ್ಲಿ ಮುಖ್ಯವಾದುವು ನಮ್ಮ ಊರಿನ ರಸಿಕರು, ಹಳ್ಳಿಯ ಚಿತ್ರಗಳು, ಬೈಲು ಹಳ್ಳಿಯ ಸರ್ವೆ, ಕಮ್ಮಾರ

ವೀರಭದ್ರಾಚಾರಿ. ಗೊರೂರರು ತಮ್ಮಳ್ಳಿಂದ ಕೆಲವು ಕತೆಗಳನ್ನು ಅನುವಾದಿಸಿದ್ದಾರೆ. ತಮ್ಮ ಸೆರೆಮನೆಯಂತು ಅನುಭವವನ್ನು ಮೆರವಣಿಗೆ ಯಲ್ಲಿ ಚಿತ್ರಿಸಿದ್ದಾರೆ.

ಗೊರೂರು ಮಲೆನಾಡು ಮತ್ತು ಬಯಲು-ಸೀಮೆಗೆ ಮಧ್ಯೆ ಇರುವ ಹಳ್ಳಿ. ಗೊರೂರರು ತಮ್ಮ ಪುಸ್ತಕಗಳಲ್ಲಿ ಆ ಭಾಗದ ಹಳ್ಳಿಯ ಜನರ ಜೀವನವನ್ನು ಚಿತ್ರಿಸುತ್ತಾರೆ. ಹಳ್ಳಿಯ ಜನರ ಸುಖ ದುಃಖಗಳಲ್ಲಿ ಬೆರೆಯುತ್ತಾರೆ. ಅವರು ಬರೆಯುವ ಭಾಷೆಗೆ ಹಳ್ಳಿಯ ಜನ ಆಡುವ ಭಾಷೆ ತಳಹದಿ. ತಮ್ಮ ಸುತ್ತ ಇರುವ ಹಳ್ಳಿಯ ಜನರಲ್ಲಿ ಅವರಿಗೆ ನಂಬಿಕೆ ಇರುವುದರಿಂದ ಅವರ ಹಾಸ್ಯ ಕಟುವಾಗುವುದಿಲ್ಲ. ಅವರು ಹಾಸ್ಯ ಲೇಖಕರು ಎಂದು ಹೆಸರಾಗಿದ್ದಾರೆ. ಸುಮಾರು ೩೦ ಪುಸ್ತಕಗಳನ್ನು ಬರೆದಿದ್ದಾರೆ.

ಚಿತ್ರ .	Portrait
ಕಟು	Harsh
ಜನಪದ ಗೀತೆ	Folk song
ಬಯಲು ಸೀಮೆ	Plains
ಬೆರೆ	Mix
ಮಲೆ ನಾಡು	Hilly country
ರಸಿಕ	Epicure
ವಿಧಾನ ಪರಿಷತ್ತು	Legislative assembly.
ಲೇಖಕ	Writer
ಸುತ್ತ	Around
ಹಾಸ್ಯ	Humour

ಕಮ್ಮಾರ ವೀರಭದ್ರಾಚಾರಿ. ಗೊರೂರು ರಾಮಸ್ವಾಮಿ
(ಆಧಾರ) ಅಯ್ಯಂಗಾರ್ಯ. ಪುಟ 92-95

ಮಹಾಪ್ರಭುರ ಕೊಟ್ಟಿಗೆ

ಸೀತಾರಾಮು ಮಂಡ್ಯಕ್ಕೆ ಮೂವತ್ತು ಮೈಲಿ ದೂರದ ಹಳ್ಳಿಯಲ್ಲಿ ಇದ್ದ. ಅವನು ವ್ಯವಸಾಯಗಾರ. ಒಳ್ಳೆ ಜಾತಿ ಎಮ್ಮೆಗಳನ್ನು ಇಟ್ಟಿದ್ದ. ಒಂದು ದಿನ ದೂರದ ಹಳ್ಳಿಯಿಂದ ರೈತನೊಬ್ಬ ಬಂದು ಒಂದು ಎಮ್ಮೆಯನ್ನು ಸೀತಾರಾಮುವಿಗೆ ಮಾರಿದ. ಎಮ್ಮೆ ಚೆನ್ನಾಗಿತ್ತು. ಆದ್ದರಿಂದ ಸೀತಾರಾಮು ಅದು ಎಲ್ಲಿಯದು ಎಂದು ವಿಚಾರಿಸದೆ ಕೊಂಡುಕೊಂಡನು. ಅವನ ಒಂಭತ್ತು ಎಮ್ಮೆಗಳ ಜೊತೆ ಈ ಎಮ್ಮೆ ಮೇಯುತ್ತಿತ್ತು. ಎಮ್ಮೆ ದಿನ ದಿನಕ್ಕೆ ಚೆನ್ನಾಯಿತು. ಬಂದವರೆಲ್ಲ ಸೀತಾರಾಮು ಹೊಸ ಎಮ್ಮೆ ಹೊಗಳಿಸುತ್ತಿದ್ದರು. ಆದರೆ ಎರಡು ತಿಂಗಳ ನಂತರ ನಂಜನ ಗೂಡಿನ

ವಿಚಾರಿಸು + ಅ + ದೆ. ಅ is added to the root verb. ಅ is a negative participle. eg ಬರೆ + ಅ + ದೆ = ಬರೆಯದೆ = without writing.

ಹತ್ತಿರದ ಹಳ್ಳಿಯವನು ಬಂದು ಎಮ್ಮೆ ನನ್ನದು ಎಂದು ಹೇಳಿದನು. ಸೀತಾರಾಮು ಕೊಡಲಿಲ್ಲ. ರೈತ ಮಂಡ್ಯದಲ್ಲಿ ಕೇಸು ಹಾಕಿದನು. ಹತ್ತು ಎಮ್ಮೆಗಳ ಜೊತೆ ಸೀತಾರಾಮು ಕೋರ್ಟಿಗೆ ಬರಬೇಕೆಂದು ಆಜ್ಞೆಯಾಯಿತು. ಅದರಂತೆ ಸೀತಾರಾಮು ಮೂರು ನಾಲ್ಕು ವಾರಗಳಿಂದ ಬರುತ್ತಿದ್ದನು. ಕೇಸನ್ನು ವಾರದಿಂದ ವಾರಕ್ಕೆ ಮುಂದೆ ಹಾಕುತ್ತಿದ್ದರು.

ಪ್ರತಿವಾರ ಆ ಹತ್ತು ಎಮ್ಮೆಗಳನ್ನು ಹೊಡೆದುಕೊಂಡು ಮಂಡ್ಯಕ್ಕೆ ಬರುತ್ತಿದ್ದನು. ಅವನು ಮೂವತ್ತು ಮೈಲಿಯ ಹಳ್ಳಿಯಿಂದ ಬರಬೇಕಾಗಿತ್ತು. ಆದ್ದರಿಂದ ಮೂರು ಆಳುಗಳ ಜೊತೆ ಒಂದು ದಿನ ಮುಂಚೆ ಬಂದು ತನ್ನ ಭಾವನ ಮನೆಯಲ್ಲಿ ಇರುತ್ತಿದ್ದ.

ಆ ದಿವಸ ಹನ್ನೊಂದು ಗಂಟೆಗೆ ಕೋರ್ಟಿನಲ್ಲಿ ವಿಚಾರಣೆಯಿತ್ತು. ಸೀತಾರಾಮು ಎಮ್ಮೆಗಳೊಡನೆ ಹೊರಟನು. ಅವನ ಮೂರು ಆಳುಗಳು ಅವನ ಜೊತೆ ಹೊರಟರು. ರೈಲುಕಂಬಿಗಳನ್ನು ದಾಟಿ ಕೋರ್ಟಿಗೆ ಹೋಗಬೇಕಾಗಿತ್ತು. ಸೀತಾರಾಮು ನನ್ನನ್ನು ಕರೆದ. ನಾನು ಕೂಡ ಅವನ ಜೊತೆ ಹೊರಟೆ. ಎಮ್ಮೆಗಳನ್ನು ನಮಗೆ ಬೇಕಾದ ಕಡೆ ಹೊಡೆದುಕೊಂಡು ಹೋಗುವುದು ಕಷ್ಟ. ಆ ಹತ್ತು ಎಮ್ಮೆಗಳ ಪೈಕಿ ಕೆಲವು ಏನು ಮಾಡಿದರೂ ಒಂದು ಹೆಜ್ಜೆಯನ್ನು ಮುಂದಕ್ಕೆ ಇಡುತ್ತಿರಲಿಲ್ಲ. ದೊಣ್ಣೆಯಿಂದ ಏಟು ಕೊಟ್ಟರೆ ಏಟು ಬಿದ್ದ ಕಾಲನ್ನು ಮೇಲಕ್ಕೆ ಎತ್ತಿ ಮತ್ತೆ ಕೆಳಕ್ಕೆ ಇಟ್ಟು ಸುಮ್ಮನಾಗುತ್ತಿದ್ದುವು. ಅವುಗಳನ್ನು ತಳ್ಳಿಕೊಂಡು ಸ್ಟೇಷನ್ ವರೆಗೆ ಬಂದೆವು. ಸ್ಟೇಷನ್ ಹತ್ತಿರ ಒಂದು

ಹೊಂಡ ಇತ್ತು. ಅದರ ತಳದಲ್ಲಿ ಸ್ವಲ್ಪ ನೀರಿತ್ತು. ತುಂಬ ಕೆಸರಿತ್ತು. ಒಂದು ಎಮ್ಮೆ ಕೆಸರನ್ನು ನೋಡಿ ಹೊಂಡದ ಕಡೆ ನುಗ್ಗಿತು. ಹತ್ತು ಎಮ್ಮೆಗಳೂ ಆ ಹೊಂಡಕ್ಕೆ ಹೋಗಿ ಕೆಸರಿನಲ್ಲಿ ಮಲಗಿದುವು. ಅವು ಬಾಲ ಬೀಸಿದಾಗ ನಮ್ಮ ಮೇಲೆ ಕೆಸರು ಹಾರುತ್ತಿತ್ತು. ಎಮ್ಮೆಗಳು ಮೇಲೆ ಬರಲಿಲ್ಲ. ಸೀತಾರಾಮುವಿನ ವಕೀಲರು ಅದೇ ದಾರಿಯಲ್ಲಿ ಕೋರ್ಟಿಗೆ ಹೋಗುತ್ತಿದ್ದರು. ಸೀತಾರಾಮುವನ್ನು ನೋಡಿ ಹೊತ್ತಾಯಿತು, ಬೇಗ ಬನ್ನಿ ಎಂದರು. ಅವರು ಹೋದ ಐದು ನಿಮಿಷಗಳಲ್ಲಿ ನ್ಯಾಯಾಧಿಪತಿಗಳೂ ಅದೇ ದಾರಿಯಲ್ಲಿ ಬಂದರು. ಕೆಸರಿನಲ್ಲಿ ಬಿದ್ದಿದ್ದ ಎಮ್ಮೆಗಳನ್ನು ಮತ್ತು ದೂರದಲ್ಲಿ ನಿಂತಿದ್ದ ನಮ್ಮನ್ನು ನೋಡಿ ನಗುತ್ತಾ ಹೊರಟು ಹೋದರು.

ಸುಮಾರು ಎರಡು ಗಂಟೆ ಕಾಲ ಸಾಹಸ ಮಾಡಿ ಕೊನೆಗೆ ಎಮ್ಮೆಗಳನ್ನು ಹಿಂಡದಿಂದ ಹೊರಡಿಸಿ ಕೋರ್ಟಿನ ಬಾಗಿಲಿಗೆ ಹೋಗಿ ನಿಂತೆವು. ಎಮ್ಮೆಗಳು ಕೋರ್ಟಿನ ಬಾಗಿಲಿನಲ್ಲಿ ಕರಿಯ ಬಂಡೆಗಳ ಗೋಡೆಗಳ ಹಾಗೆ ನಿಂತವು. ಒಳಕ್ಕೆ ಹೋಗುವುದು, ಹೊರಕ್ಕೆ ಬರುವುದು ಕಷ್ಟವಾಗಿತ್ತು. ಅವು ಬಾಲ ಬೀಸಿದಾಗ ಹತ್ತಿರ ಇದ್ದ ವಕೀಲರ ಮೇಲೆ ಕೆಸರು ಹಾರುತ್ತಿತ್ತು. ವಕೀಲರುಗಳು ಅಲ್ಲಿಂದ ಇಲ್ಲಿಗೆ ಸರಿಯುತ್ತಿದ್ದರು. ಎಮ್ಮೆಗಳನ್ನು ಬೇರೆಂತು ಕಡೆ ನಿಲ್ಲಿಸಲು ನಮಗೆ ಆಗಲಿಲ್ಲ.

ಕೇಸು ಪ್ರಾರಂಭವಾಯಿತು. ಸೀತಾರಾಮು ಒಳಕ್ಕೆ ಹೋದನು. ಆ ಹೊತ್ತಿಗೆ ಸರಿಯಾಗಿ ಕೋರ್ಟಿನ

ಬಾಗಿಲಿನಲ್ಲಿ ನಿಂತಿದ್ದ ಜವಾನನ ತಲೆಯ ಕೆಂಪು ಪೇಟ ಬಿಚ್ಚಿಕೊಂಡಿತು. ಅದನ್ನು ಸರಿಯಾಗಿ ಸುತ್ತಿಕೊಳ್ಳಲು ಜವಾನ ಬಿಚ್ಚಿದನು. ಉದ್ದವಾಗಿದ್ದ ಆ ಕೆಂಪು ಬಟ್ಟೆಯನ್ನು ನೋಡಿ ಎಮ್ಮೆಗಳು ಹೆದರಿದುವು. ಸೀತಾರಾಮಯ್ಯನ ಹಿಂದೆ ಕೋರ್ಟಿನೊಳಕ್ಕೆ ನುಗ್ಗಿದುವು. ಜವಾನನಿಗೆ ಅವುಗಳನ್ನು ತಡೆಯಲು ಆಗಲಿಲ್ಲ. ಎಮ್ಮೆಗಳು ಒಳಕ್ಕೆ ನುಗ್ಗಿದ ಕೂಡಲೇ ವಕೀಲರು ಹೆದರಿ ಕುರ್ಚಿಗಳನ್ನು ಬಿಟ್ಟು ಮೇಜಿನ ಮೇಲೆ ನಿಂತರು. ಇಬ್ಬರು ವಯಸ್ಸಾದ ವಕೀಲರು ನ್ಯಾಯಾಧಿಪತಿಗಳು ಕುಳಿತಿದ್ದ ಎತ್ತರವಾದ ವೇದಿಕೆಯ ಮೇಲೆ ಹತ್ತಿ ನಿಂತರು. ನ್ಯಾಯಾಧಿಪತಿಗಳಿಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಆರ್ಡರ್, ಆರ್ಡರ್ ಎಂದು ಮೇಜನ್ನು ತಟ್ಟಿದರು.

ಆಜ್ಞೆ	Order
ಎಮ್ಮೆ	Buffalo
ಏಟು	Beating
ಕಾಳಗ	Fight
ಕೆಸರು	Wet Mud
ಗೋಡೆ	Wall
ಸೇವಕ	Servant
ಜಾತಿ	Kind
ತಟ್ಟು	Beat
ತಳ	Bottom
ತಳ್ಳು	Push
ದೊಣ್ಣೆ	Staff
ನ್ಯಾಯಾಧಿಪತಿ	Judge
ನಂತರ	After
ಪೈಕಿ	Among
ಪೇಟ	Turban
ಬಿಚ್ಚು	Untie
ಬಾಲ	Tail

ಅಲೆಗು	Ware
ಬಂಡೆ	Rock
ಮುಂಚೆ	Before
ಮೇಯು	Graze
ಮಹಿಷಾಸುರ	A legendary demon, a buffalo.
ವ್ಯವಸಾಯ ಗಾರ	Farmer
ಸುತ್ತಿಕೊಳ	Tie around
ಹೊಂಡ	Pond
ವೇದಿಕೆ	Platform
ರೈಲು ಕಂಬಿ	Railway tracts.

ಹಳ್ಳಿಯ ಚಿತ್ರಗಳು ಗೊರೂರು ರಾಮಸ್ವಾಮಿ ಅಯ್ಯಂಗಾರ್ಯ.

(ಆಧಾರ) ಶೀನಪ್ಪನ ಪಾರಿಂಗ್ ಪುಟ 92-93

ನನ್ನ ಸ್ನೇಹಿತ ಶೀನಪ್ಪ ಬಿ. ಎ. ಪರೀಕ್ಷೆ ಪಾಸು ಮಾಡಿದ್ದ. ಷೋಕಿ ಬಹಳ. ಹನ್ನೆರಡು ಸೂಟು ಇಟ್ಟಿದ್ದ. ಪ್ರತಿದಿನ ಮುಖಕ್ಷೌರ ಮಾಡಿಕೊಳ್ಳುತ್ತಿದ್ದ. ನಾನು ಬಂದು ದಿವಸ ಅವನನ್ನು ಬಾಯ್ಯ', ನಮ್ಮ ಗದ್ದೆಯ ಹತ್ತಿರಕ್ಕೆ ಹೋಗಿ ಬರೋಣ. ಪೈರು ಹಸಿರಾಗಿ ಕಣ್ಣಿಗೆ ಇಂಪಾಗಿದೆ, ಮನೆಯಲ್ಲಿ ಹೆಗ್ಗಣದಂತೆ ಕುಳಿತು ಏನು ಮಾಡುತ್ತೀಯೆ? ಎಂದು ಕರೆದೆ. ಶೀನಪ್ಪ ಹಾಗೇ ಆಗಲಿ, ಅದಕ್ಕೇನು Green fields are a sight worth seeing, ನೀನು ಹೋಗು ನಾನು ಅರ್ಧಗಂಟೆ ಬಿಟ್ಟು ಬರುತ್ತೇನೆ ಎಂದ.

ಬಾಯ್ಯ - ಬಾ + ಅಯ್ಯ

ನಾನು ಗದ್ದೆಗೆ ಹೋದೆ.

ನಾನು ಗುದ್ದಲಿಯನ್ನು ಹಿಡಿದುಕೊಂಡು ಗದ್ದೆಯ ಕೆಸರನ್ನು ಎತ್ತಿ ಬೇರೆ ಕಡೆಗೆ ಹಾಕುತ್ತಿದ್ದೆ. ನನ್ನ ಜೊತೆ ನಮ್ಮ ಆಳು ಬೋರ ಕಳೆ ಕೀಳುತ್ತಿದ್ದ. ಒಂದು ಸಲ ಬೋರನು ನಾಲೆಯ ಏರಿಯ ಕಡೆ ತಿರುಗಿ ಯಾರೋ ದೊರೆಗುಳು[2] ಈ ಕಡೆ ಬರ್‍ತಾ ಇದಾರೆ ಬುದ್ಧಿ ಎಂದ. ನಮ್ಮ ಊರಿನಲ್ಲಿ ದೊರೆಗಳನ್ನು ಕಾಣುವುದು ಅಪರೂಪ. ನಾನು ಕತೆ ಎತ್ತಿ ನಾಲೆಯ ಏರಿಯ ಕಡೆ ನೋಡಿದೆ. ಕೋಟು, ಬೂಟು ಪ್ಯಾಂಟು ಹಾಕಿಕೊಂಡ ಒಬ್ಬ ಮನುಷ್ಯನನ್ನು ನೋಡಿದೆ. ಸ್ವಲ್ಪ ಹೊತ್ತು ನೋಡಿದ ಮೇಲೆ ಅವನು ನಮ್ಮ ಸ್ನೇಹಿತ ಶೀನಪ್ಪ ಎಂದು ಗೊತ್ತಾಯಿತು. ಅವನ ಡ್ರೆಸ್ಸನ್ನು

[2] ದೊರೆ + ಗಳು = ದೊರೆಗಳು (ದೊರೆಗುಳು)

ನೋಡಿ ಇವನೇನು ಪರೀಕ್ಷೆಗೆ ಹೊರಟಿದಾನೋ; ಅಥವಾ ಕಾನ್ವೊಕೇಷನ ಡಿಗ್ರಿ ತೆಗೆದು ಕೊಳ್ಳುವುದಕ್ಕೆ ಹೊರಟಿದಾನೋ ಎಂದು ಯೋಚಿಸಿದೆ. ಗದ್ದೆ ಬದುವಿನ ಕೆಸರಿಗೆ ಬರುವವನಿಗೆ ಈ ಮದುವಣಿಗನ ಉಡುಪು ಯಾಕೆ? ಕೈಯಲ್ಲಿ ಮಡಿಚಿ ಇಟ್ಟುಕೊಂಡ ನಿಲುವಂಗಿ ಯಾಕೆ? ಕೊಡೆ, ಬಣ್ಣದ ಕನ್ನಡಕ, ವಾಕಿಂಗ ಸ್ಟಿಕ್ ಯಾಕೆ? ನನಗೆ ಸ್ವಲ್ಪ ನಗು ಬಂತು. ಶೀನಪ್ಪ ದೂರದಲ್ಲಿದ್ದುದರಿಂದ ಹೆದರಿಕೆ ಇಲ್ಲದೆ ನಕ್ಕೆ.

ಕಾಲುವೆಂತು ಬದುವನ್ನು ಬಿಟ್ಟು ಶೀನಪ್ಪ ಗದ್ದೆಯ ಬದುವಿಗೆ ಇಳಿದನು. ನಮ್ಮೂರ ಗದ್ದೆಯ ಜಮೀನು ಬಹಳ ಒಳ್ಳೆಯದು. ಆದ್ದರಿಂದ ಬದು ಬಹಳ ಕಿರಿದು. ಕೇವಲ ಒಂದು ಗೇಣು ಮಾತ್ರ ಅಗಲ. ಅದರ ಮೇಲೆ ಯಾವಾಗಲೂ ನೀರು ಹರಿಯುತ್ತಿರುತ್ತದೆ.

ಅದರ ಮಣ್ಣು ಬಹಳ ಅಳ್ಳಕ. ನಾವು ಬದುವಿನ ಮೇಲೆ ನಡೆಯುವುದಿಲ್ಲ. ಏಕೆಂದರೆ ನಡೆಯಲು ಪ್ರಯತ್ನಿಸಿದರೆ ಗದ್ದೆಯ ಕೆಸರಿನೊಳಕ್ಕೆ ಬೀಳುವುದು ಖಂಡಿತ.

ಶೀನಪ್ಪ ಬದುವಿನ ಮೇಲೆ ನಡೆಯಲು ಪ್ರಾರಂಭಿಸಿದ. ಆ ಕಡೆ ಗದ್ದೆ, ಈ ಕಡೆ ಗದ್ದೆ. ಹದಿನೇಳು ರೂಪಾಯಿನ ಕಚ್ ಕಚ್ ಶಬ್ದ ಇಂಗ್ಲಿಷ್ ಬೂಟ್ಸು ಕೆಸರಾಗಬಾರದೆಂದು[3] ಅವನು ಉಪಾಯವಾಗಿ ಬದುವಿನ ಮೇಲೆ ನಡೆಯುತ್ತಿದ್ದ. ಒಂದೇ ರೈಲು ಕಂಬಿಯ ಮೇಲೆ ನಡೆಯುವವನ ಹಾಗೆ ಓಲಾಡುತ್ತಿದ್ದ. ಅವನು ಕೆಳಕ್ಕೆ ಬೀಳಬಹುದು ಎಂದು ನನಗೆ ಗೊತ್ತಾಯಿತು. ಬರಬೇಡ ಎಂದು ಕೂಗಿ ಹೇಳಿದರೆ ಅವನು ಅಲ್ಲಿ ನಿಲ್ಲುತ್ತಿದ್ದನು.

[3] ಕೆಸರು + ಆಗಬಾರದು + ಎಂದು = ಕೆಸರಾಗಬಾರದೆಂದು

ಇದರ ಸುಲಭವಾಗಿ ಸಿಕ್ಕುವ ತಮಾಷೆಯನ್ನು ಕಳೆದು ಕೊಳ್ಳಬಾರದು ಎಂದು ನಾನು ಸುಮ್ಮನಾದೆ.

ಈ ಹೊತ್ತಿಗೆ ಶೀನಪ್ಪನು ಒಂದು ಕಿರಿದಾದ ಬದುವಿನ ಮೇಲೆ ಓಲಾಡುತ್ತಿದ್ದನು. ಎಡಗಡೆಯ ಗದ್ದೆ ಸ್ವಲ್ಪ ಹಳ್ಳದಲ್ಲಿತ್ತು. ನನಗೆ ಮತ್ತು ಅವನಿಗೆ ನಡುವೆ ಏಳು ಚಿಕ್ಕ ಬದುಗಳಿದ್ದುವು. ಅವನ ಕರಿಯ ಸರ್ಜಿನ ಪೈಜಾಮೆಯ ಮೇಲೆ ಕೆಸರು ಹಾರಿತ್ತು. ಶೀನಪ್ಪ ಒಂದು ಸಲ ಬಲಗಡೆ ಹೆಚ್ಚಾಗಿ ಓಲಾಡಿದನು. ತನ್ನ ತೂಕವನ್ನು ಸರಿಪಡಿಸಿಕೊಳ್ಳಲಿಕ್ಕೆ ಮತ್ತೆ ಸ್ವಲ್ಪ ಹೆಚ್ಚಾಗಿ ಎಡಗಡೆಗೆ ಬಾಗಿದನು. ಕೂಡಲೇ ಬದುವಿನ ಮೇಲೆ ಬರುತ್ತಿದ್ದ ಸಾಹೇಬ ಮರೆಯಾದನು.

ಅಗಲ	Broad
ಅರು	Father
ಅಳ್ಳಕ	Loose
ಇಂಪು	Pleasant
ಏರಿ	Bank, bund.
ಉಡುಪು	Dress
ಎಡಗಡೆ	Left side
ಏಳು	Seven
ಉಷಾರು	Careful
ಓಲಾಡು	Swing, wobble
ಕಳೆ	Weeds
ಕನ್ನಡಕ	Spectacles
ಕಡಿದು	Steep
ಕೊಡೆ	Umbrella
ಗದ್ದೆ	Irrigated lands
ಗೇಣು	Palms breadth
ಕಿರಿದು	Narrow

ಗುದ್ದಲಿ	agricultural implement, used for digging
ತಮಾಷೆ	Fun
ನಿಲುವಂಗಿ	Long coat
ನಾಲೆ	Canal
ಪೈರು	Crop
ಬಾಗು	Bend
ಬದು	Side
ಮದುವಣಿಗ	Bridegroom
ಮರೆಯಾಗು	Disappear
ಷರಾಯಿ	Pants
ಷೋಕಿ	Fashion
ಸಾಹೇಬ	Officer, whiteman.
ಸಂಭಾಳಿಸು	To Balance
ಸುಲಭ	Easy
ಹರಿ	Flow
ಹಸಿರು	Green
ಹಳ್ಳ	Slope, ditch
ಸಮತೂಕ	Equal weight

ಸಿ. ಕೆ. ವೆಂಕಟರಾಮಯ್ಯ, 1896-

ಸಿ.ಕೆ. ವೆಂಕಟರಾಮಯ್ಯನವರು ಬೆಂಗಳೂರಿನ ಹತ್ತಿರ ಇರುವ ಚೆನ್ನಪಟ್ಟಣದಲ್ಲಿ 1896 ರಲ್ಲಿ ಹುಟ್ಟಿದರು. ಅವರ ವಿದ್ಯಾಭ್ಯಾಸ ಮೈಸೂರು ಮತ್ತು ಬೊಂಬಾಯಿ ವಿಶ್ವವಿದ್ಯಾನಿಲಯಗಳಲ್ಲಿ ಆಯಿತು. ವಿದ್ಯಾಭ್ಯಾಸ ಆದ ಮೇಲೆ ಕೆಲವು ವರ್ಷ ಚನ್ನಪಟ್ಟಣದಲ್ಲಿ ವಕೀಲರಾಗಿದ್ದರು. ಆಮೇಲೆ ಆ ಕೆಲಸ ಬಿಟ್ಟು ಮೈಸೂರು ಸರ್ಕಾರದ ಮುಖ್ಯ ಅನುವಾದಕರಾಗಿ ಕೆಲಸ ಮಾಡಿದರು.

ವೆಂಕಟರಾಮಯ್ಯನವರು ವಿದ್ಯಾರ್ಥಿಗಳಾಗಿದ್ದಾಗ ಪುಸ್ತಕಗಳನ್ನು ಬರೆಯಲು ಪ್ರಾರಂಭಿಸಿದರು. ಎ. ಆರ್. ಕೃಷ್ಣಶಾಸ್ತ್ರಿಗಳು ಸ್ಥಾಪಿಸಿದ ಪ್ರಬುದ್ಧ ಕರ್ನಾಟಕದಲ್ಲಿ ಅವರ ಮೊದಲನೆಯ ಕಾದಂಬರಿ ಸಂಯುಕ್ತೆ ಪ್ರಕಟವಾಯಿತು. ಅವರು ಕತೆಗಳು, ನಾಟಕಗಳು, ವಿಮರ್ಶೆ, ಜೀವನ ಚರಿತ್ರೆ ಬರೆದಿದ್ದಾರೆ.

ಅವರ ವಿಮರ್ಶಾ ಗ್ರಂಥಗಳಲ್ಲಿ ಸಂಸ್ಕೃತ ನಾಟಕಕಾರರಾದ ಕಾಳಿದಾಸ ಮತ್ತು ಭಾಸನ ಮೇಲೆ ಬರೆದ ಪುಸ್ತಕಗಳು ಮುಖ್ಯ. ಅವರ ನಾಟಕಗಳಲ್ಲಿ ನಚಿಕೇತ ಮತ್ತು ಮಂಡೋದರಿ ಎಂಬ ಪೌರಾಣಿಕ ನಾಟಕಗಳು ಮುಖ್ಯ. ಇಸ್ಲಾಂ ಧರ್ಮ ಸ್ಥಾಪಕರಾದ ಮಹಮದ್ ಪೈಗಂಬರನ, ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಅಬ್ರಹಾಂ ಲಿಂಕನ್ನನ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ.

ಕನ್ನಡ ಜನ ಅವರನ್ನು 1947ರ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು. ವೆಂಕಟರಾಮಪ್ಪನವರು ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಗ್ರಂಥ	Book
ಜೀವನ ಚರಿತ್ರೆ	Life history (biography)
ಧರ್ಮ	Religion
ನಾಟಕಕಾರ	Dramatist
ಸ್ಥಾಪಕ	Founder

"ಅಚ್ಯುತರಾಯನ ಇಡ್ಲಿ ಅಡ್ವೆಂಚರ್ಸ್"

ಚಿತ್ರ ವಿಮರ್ಶೆ ಮತ್ತು ಇತರ ಕತೆಗಳು ಡಿ.ಕೆ. ವೆಂಕಟರಾಮಯ್ಯ

ಪುಟ 122-123 (ಆಧಾರ)

ಇಡ್ಲಿ ಕಾಫಿ ಬರುವ ಹೊತ್ತಿಗೆ ರಾಯರು ತಮ್ಮ ಕೋಟನ್ನು ಬಿಚ್ಚಿ ಅದನ್ನು ರುಮಾಲನ್ನು ದೂರ ಇಟ್ಟರು. ಅದಕ್ಕೆ ಕಾರಣ ಹಿಂದೆ ಒಂದು ದಿನ ಇಡ್ಲಿ ತಿನ್ನುವಾಗ ಕೋಟಿನ ಮೇಲೆ ಕಾಫಿ ಬಿದ್ದಿತ್ತು, ರುಮಾಲಿಗೆ ಇಡ್ಲಿ ಮೆತ್ತಿಕೊಂಡಿತ್ತು. ರಾಯರು ಕ್ರಾಪು ಬಿಟ್ಟಿರಲಿಲ್ಲ. ಆದ್ದರಿಂದ ಅವರ ಉದ್ದವಾದ ಕೂದಲು ಬೆನ್ನಿನ ಮೇಲೆ ಹಾರಾಡುತ್ತಿತ್ತು. ಆಗ ಎರಡು ಗಂಟೆ. ಕಾಲೇಜು ಕಟ್ಟಡದ ಬೇರೆ ಬೇರೆ ಭಾಗಗಳಿಂದ ಗುಮಾಸ್ತರು ಬರಲು ಇನ್ನೂ ಹದಿನೈದು ನಿಮಿಷಗಳಿದ್ದುವು. ರಾಯರಿಗೆ ಹಸಿವು. ಮಾಣಿಯು ವಾಡಿಕೆಯಂತೆ ಇಡ್ಲಿ ಕಾಫಿಯನ್ನು ತಂದಿಟ್ಟು ಹೊರಟು ಹೋದನು. ರಾಯರು ಬೇಗನೆ ಬೆಳ್ಳಗಿದ್ದ ಇಡ್ಲಿಗಳಲ್ಲಿ

ಬಿಂದನ್ನು ಮುರಿದು ಬಾಯಿಗೆ ಹಾಕಿಕೊಂಡರು. ಸಾಹೇಬರನ್ನು [illegible] ಹಾಡಿ ಎಂದು ಕೇಳಬೇಕೇ ಅಥವಾ ಬೇಡವೇ ಎಂದು ಯೋಚಿಸುತ್ತ ಕುಳಿತರು. "ಎಲ್ಲರನು ಸಲಹುವನು ಇದಕೆ ಸಂಶಯ ವಿಲ್ಲ" ಎಂದು ಹಾಡಲು ಪ್ರಾರಂಭಿಸಿದರು. ರಾಯರು ಕುಳಿತಿದ್ದ ಕುರ್ಚಿಗೆ ಸ್ವಲ್ಪ ದೂರದಲ್ಲಿದ್ದ ಬಾಗಿಲಿನಿಂದ ಆ ಸಮಯಕ್ಕೆ ಸರಿಯಾಗಿ ಸಾಹೇಬರು ಬಂದರು. ಸಾಹೇಬರು ಎಂದೂ ಆ ಬಾಗಿಲಿನಿಂದ ಬಂದಿರಲಿಲ್ಲ. ಕೋಟಿಲ್ಲದೆ, ರುಮಾಲಿಲ್ಲದೆ ಜುಟ್ಟು ಬಿಟ್ಟುಕೊಂಡಿದ್ದ ರಾಯರನ್ನು ಆ ವೇಷದಲ್ಲಿ ಹಿಂದೆ ಎಂದೂ ನೋಡಿರಲಿಲ್ಲ. ರಾಯರಿಗೆ ಬಹಳ ಗಾಬರಿಯಾಯಿತು.

ಸಾಹೇಬರು ಬಹಳ ಗಂಭೀರ. ಕಷ್ಟದಿಂದ ನಗುವನ್ನು ತಡೆದುಕೊಂಡು ಸ್ವಲ್ಪ ಹೊತ್ತು ಸುಮ್ಮನೆ ನಿಂತರು. ಅವರ ದೃಷ್ಟಿಯು ಮೇಜಿನ ಮೇಲಿದ್ದ

ಬೇಸಿನ್ ಕಡೆಗೆ ಹೋಯಿತು. ಅದು ಸಾಹೇಬರ ಕೊಠಡಿಯಲ್ಲಿ ಕೈ ತೊಳೆದುಕೊಳ್ಳುವುದಕ್ಕೆ ಇಟ್ಟಿದ್ದ ಬಿಳಿಯ ಬಣ್ಣದ ಪಿಂಗಾಣಿ ಬೇಸಿನ್. ಸಾಹೇಬರು ಅದನ್ನು ಉಪಯೋಗಿಸುತ್ತಿರಲಿಲ್ಲ. ಆದ್ದರಿಂದ ರಾಯರು ಇಡ್ಲಿಗಳನ್ನು ತಣಿಸಲು ಅದನ್ನು ಬಳಸುತ್ತಿದ್ದರು. ಆದರೆ ಸಾಹೇಬರ ಅನುಮತಿ ಪಡೆದಿರಲಿಲ್ಲ. ಸಾಹೇಬರು ಅದರ ಕಡೆ ನೋಡಿ ಇದೆಲ್ಲಿ ಹೋಯಿತೋ ಎಂದು ಆಶ್ಚರ್ಯ ಪಡುತ್ತಿದ್ದರು. ಇದು ಇಲ್ಲಿದೆಯೇ ಎಂದರು. ರಾಯರಿಗೆ ಹೆದರಿಕೆ ಆಯಿತು. ಬೇಗನೆ ನಿಂತು ರುಮಾಲು ಹಾಕಿಕೊಂಡರು. ತಾವು ಅದನ್ನು ಹಿಂದು ಮುಂದಾಗಿ ಹಾಕಿಕೊಂಡುದು ಅವರಿಗೆ ತಿಳಿಯಲಿಲ್ಲ. ಕೋಟನ್ನು ಹಾಕಿಕೊಳ್ಳಲು ಹೋದರು. ಸಾಹೇಬರು ತೊಂದರೆ ತೆಗೆದುಕೊಳ್ಳಬೇಡಿ ಎಂದರು. ಆದರೆ ರಾಯರು ಮಾತಾಡಲಿಲ್ಲ. ಸಾಹೇಬರು

ಇಡ್ಲಿಗಳ ಕಡೆ ಕೈ ತೋರಿಸಿ ಅವೇನು ಎಂದರು. ರಾಯರು ಇಡ್ಲಿ, ಇಡ್ಲಿ ಸಾ ಎಂದು ಉತ್ತರ ಹೇಳಿದರು. ಸಾಹೇಬರು ಅಲ್ಲಿದ್ದ ಟೇಬಲ್ ಕಡೆ ಕೈ ತೋರಿಸಿದಾಗ ರಾಯರು ಕಾಫಿ, ಕಾಫೀ ಸಾ ಎಂದರು. ಅಲ್ಲಿ ಎಷ್ಟು ಇಡ್ಲಿಗಳಿವೆ, ಅವುಗಳ ಬೆಲೆ ಎಷ್ಟು ಎಂದು ಸಾಹೇಬರು ಕೇಳಿದರು. ರಾಯರು ಅಲ್ಲಿ ಮೂವತ್ತೆರಡು ಇಡ್ಲಿಗಳಿವೆ, ಒಂದೊಂದಕ್ಕೆ ಆರು ಕಾಸು, ಚಟ್ನಿ ಪಲ್ಯಕ್ಕೆ ಬೇರೆ ದುಡ್ಡು ಕೊಡಬೇಕು ಎಂದು ಹೇಳಿದರು. ಸಾಹೇಬರು ಬೇರೆ ಕೆಲವು ಪ್ರಶ್ನೆಗಳನ್ನು ಕೇಳಿ ತಾವು ಮತ್ತೆ ಕಾಲೇಜಿಗೆ ಬರುವುದಿಲ್ಲ ಎಂದು ಹೇಳಿದರು. ನಿಮಗೆ ತೊಂದರೆ ಕೊಟ್ಟದ್ದಕ್ಕೆ ಕ್ಷಮಿಸಿ ಎಂದು ಹೇಳಿ ಹೋದರು. ರಾಯರು ಸಾಹೇಬರು ತಮ್ಮನ್ನು ಕೆಲಸದಿಂದ ತೆಗೆದುಹಾಕುತ್ತಾರೆ ಎಂದು ಹೆದರಿದರು.

ಮನೆಗೆ ಹೋದ ಮೇಲೆ ಸಾಹೇಬರು ಪ್ರತಿದಿನ ಮೂವತ್ತೆರಡು ಇಡ್ಲಿಗಳನ್ನು ತಿನ್ನುವ ರಾಯರಿಗೆ ಸಂಬಳ ಸಾಕಾಗುವುದಿಲ್ಲ ಎಂದು ಕಂಡರು. ನನ್ನ ಸಂಬಳದಿಂದ ತಿಂಗಳಿಗೆ ಮೂವತ್ತು ರೂಪಾಯಿ ಇಡ್ಲಿ ಅಲೋಯನ್ಸ್ ಕೊಡುತ್ತೇನೆ, ದಯವಿಟ್ಟು ತೆಗೆದು ಕೊಳ್ಳಬೇಕು ಎಂದು ಬರೆದರು. ಕಳೆದ ಎರಡು ತಿಂಗಳ ಅಲೋಯನ್ಸ್ ಎಂದು ಅರುವತ್ತು ರುಪಾಯಿಗಳಿಗೆ ಚೆಕ್ ಕಳುಹಿದರು.

ಅನುಮತಿ	Consent
ಅರುಕಾಸು	Six pies (½ anna)
ಇಡ್ಲಿ	A rice dish
ಕೆಲಸ	Job
ಗಾಬರಿ	Scare
ಗಂಭೀರ	Grave
ಜುಟ್ಟು	Tuft of hair (back of head)
ತಡೆ	Hold
ತೊಂದರೆ	Trouble
ದೃಷ್ಟಿ	Attention
ಬಳಸು	Use
ಮಾಣಿ	Butler
ಮೂವತ್ತೆರಡು	Thirty two
ವೇಷ	Guise
ಮೊತ್ತಕೋಲ	Stick
ಸಲಹು	Protect
ಸಂಶಯ	Doubt
ಹಸಿವು	Hunger
ಹಾರಾಡು	Fly around

ಕುಳಕುಂದ ಶಿವರಾಯ, 1923-

ಕುಳಕುಂದ ಶಿವರಾಯರು 1923ರಲ್ಲಿ ಬೆಂಗಳೂರಲ್ಲಿ ಹುಟ್ಟಿದರು. ಅನೇಕ ವರ್ಷಗಳ ಕಾಲ ಇವರು ಕಮ್ಯೂನಿಸ್ಟ ಪಕ್ಷಕ್ಕೆ ಸೇರಿದ್ದರು. ಆದ್ದರಿಂದ ಇವರು ಮೊದಲು ಬರೆದ ಪುಸ್ತಕಗಳಲ್ಲಿ ಸಮಾಜದಲ್ಲಿರುವ ಅನ್ಯಾಯ, ಬಡ ಜನರ ಕಷ್ಟಗಳನ್ನು ಚಿತ್ರಿಸಿದ್ದಾರೆ. ಶಿವರಾಯರು ಸಾಹಿತ್ಯದ ಜೊತೆ ಪತ್ರಿಕಾ ವ್ಯವಸಾಯವನ್ನು ಕೂಡ ಮಾಡಿದ್ದಾರೆ. ಕರ್ನಾಟಕದಲ್ಲಿ ಪ್ರಗತಿಶೀಲ ಲೇಖಕರ ಸಂಘ ಸ್ಥಾಪಿತವಾದಾಗ ಅದರಲ್ಲಿ ಶಿವರಾಯರು ಮುಖ್ಯ ಭಾಗ ವಹಿಸಿದರು. ಪ್ರಗತಿಶೀಲ ಲೇಖಕರ ಮೇಲೆ ವಾಸ್ತವಿಕ ವಾದಿಗಳ ಮತ್ತು ಅತಿವಾಸ್ತವಿಕ ವಾದಿಗಳ ಪ್ರಭಾವ ಹೆಚ್ಚು ಇತ್ತು. ಸಾಹಿತ್ಯ ಸಾಮಾಜಿಕ ಸತ್ಯವನ್ನು ಚಿತ್ರಿಸಬೇಕು, ಜೀವನವನ್ನು

ಬದಲಾಯಿಸಲು ಬಡಜನರು ಮಾಡುವ ಪ್ರಯತ್ನಗಳನ್ನು ಚಿತ್ರಿಸಿಲ್ಲ ಎಂದು ಪ್ರಗತಿಶೀಲ ಲೇಖಕರು ನಂಬಿದ್ದರು.

ಆದರೆ ಈಚೆಗೆ ಶಿವರಾಯರು ಬರೆಯುವ ಕಾದಂಬರಿಗಳಲ್ಲಿ ಹಿಂದೆ ಬರೆದ ಕಾದಂಬರಿಗಳಲ್ಲಿದ್ದ ನಿಟ್ಟು ಇಲ್ಲ. ಅದರ ಬದಲಾಗಿ ಕಳವಳ ಇದೆ. ಶಿವರಾಯರು ಬಡ ಜನರ ಜೀವನವನ್ನು ಚೆನ್ನಾಗಿ ಚಿತ್ರಿಸುತ್ತಾರೆ. ಅವರ ಕಾದಂಬರಿಗಳಲ್ಲಿ ರಂಗಮ್ಮನ ವಠಾರ ಮುಖ್ಯ. ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಚಿರಸ್ಮರಣೆ ಎಂಬ ಕಾದಂಬರಿ ಬರೆದಿದ್ದಾರೆ. ಶಿವರಾಯರ ಕಾದಂಬರಿಗಳ ಮುಖ್ಯವಸ್ತು ಬಡಜನರು ಮತ್ತು ಅವರ ಮಾನವೀಯತೆ. ಚೆಕಾಫನ ಮತ್ತು ಮ್ಯಾಕ್ಸಿಂ ಗಾರ್ಕಿಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸುಮಾರು ನಲವತ್ತು ಪುಸ್ತಕಗಳನ್ನು ಬರೆದಿದ್ದಾರೆ.

ಕಳವಳ	Compassion
ಚಿರಸ್ಮರಣೆ	Eternal remembrance
ಪಕ್ಷ	Party
ಪ್ರಗತಿಶೀಲ ಲೇಖಕರ ಸಂಘ	Association of progressive writers.
ಮಾನವೀಯತೆ	Humanity
ಬದಲಾಗಿ	In place of
ಮುಖ್ಯ ವಸ್ತು	Subject matter
ವಠಾರ	Apartment house.
ವಾಸ್ತವಿಕವಾದಿ	Realist
ಅತಿ ವಾಸ್ತವಿಕವಾದಿ	Naturalist
ಸತ್ಯ	Truth
ಸ್ಥಾಪಿತ	founded
ಹೋರಾಟ	Struggle

ರಂಗಮ್ಮನ ವಠಾರ ಪುಸ್ತಕದಿಂದ ಶಿವರಾಯ

(ಆಧಾರ) ಪುಟ 18-19

ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಮೊದಲು ಸ್ನಾನ ಮಾಡಿಸಲು ನಾರಾಯಣನ ದೇಹವನ್ನು ಹೊರಕ್ಕೆ ತಂದರು. ರಂಗಮ್ಮ ಎಂದಿಗಿಂತ ಮುಂಚೆ ಕೊಳಾಯಿಯ ಬೀಗ ತೆಗೆದರು. ಸಾಧಾರಣವಾಗಿ ಮೂರು ಕೊಡ ನೀರು ವಠಾರದ ಪ್ರತಿಯೊಂದು ಮನೆಗೆ ಉಚಿತ. ಆಮೇಲೆ ಪ್ರತಿ ಮೂರು ಕೊಡಕ್ಕೆ ತಿಂಗಳಿಗೆ ಎಂಟಾಣೆ. ಆದರೆ ಈ ದಿನ ಅಂತಹ ಲೆಕ್ಕಾಚಾರವಿರಲಿಲ್ಲ.

ರಂಗಮ್ಮ ಅಂದರು:

"ತಗೊಳ್ಳಿಪ್ಪಾ[1], ಎಷ್ಟು ಬೇಕಾದರೂ ತಗೊಂಡು ಹೋಗಿ ನೀರು."

ಜೀವವಿಲ್ಲದ ನಾರಾಯಣನ ಮುಖದ ಮೇಲೆ ನೆಮ್ಮದಿ

1. ತೆಗೆದುಕೊಳ್ಳಿ ಅಪ್ಪ = please take

ಇರಲಿಲ್ಲ! ಆಕೆ ಇಟ್ಟುಕೊಂಡು ಸತ್ತ ಹಾಗಿತ್ತು ಆ ದೇಹ. ಆ ದೇಹಕ್ಕೆ ಅರಿಶಿನ ಹಚ್ಚಿದರು. ಮದುವೆಯ ಕಾಲದಲ್ಲಿ ಆಕೆ ಉಟ್ಟಿದ್ದ ಧರ್ಮಾವರದ ಸೀರೆಯನ್ನು ಉಡಿಸಿದರು. ಹಣೆಗೆ ಕುಂಕುಮ ಇಟ್ಟರು. ಆ ದೇಹವನ್ನು ನಾಲ್ಕು ಜನ ಮೇಲಕ್ಕೆ ಎತ್ತಿದಾಗ ಮತ್ತೆ ಅಳುವಿನ ಧ್ವನಿ ಕೇಳಿಸಿತು. ವಠಾರದಲ್ಲೆಲ್ಲ ಅಳು ತುಂಬಿತು.

ಬಾಗಿಲ ಹತ್ತಿರ ಹೊಸಿಲನ್ನೂರಿ ನಿಂತಿದ್ದ ರಂಗಮ್ಮ ಮೆಲ್ಲಗೆ ಮಾತಾಡಲು ಪ್ರಾರಂಭಿಸಿದರು. "ಹೋಗ್ತೀಯಾ ನಾರಾಯಣೀ... ಹೋಗ್ತೀಯಾ..."

ನಾರಾಯಣಿ ರಂಗಮ್ಮನ ವಠಾರವನ್ನು ಬಿಟ್ಟು ಹೋದಳು. ಸೂರ್ಯ ಮುಳುಗಿದ. ಕತ್ತಲೆ ಆಯಿತು. ಬೀದಿಯ ದೀಪಗಳು ಹತ್ತಿಕೊಂಡುವು.

ರಂಗಮ್ಮ ವರಾಂಡದ ಹತ್ತಿರ ಗೋಡೆಗೊರಗಿ ಅತ್ತತ್ತು ಹೋಗಿದ್ದ ಕಣ್ಣುಗಳಿಂದ ಆಕಾಶದ ಕಡೆ ನೋಡುತ್ತ ನಿಂತಿದ್ದಳು.

ಬೇರೆ ದಿನವಾಗಿದ್ದರೆ ವರಾಂಡದ ಯಾರಾದರೂ ರಂಗಮ್ಮನ ಹತ್ತಿರ ಹೋಗಿ "ದೀಪ ಹಾಕ್ತೀರಾ?" ಎಂದು ಕೇಳುತ್ತಿದ್ದರು. ಆದರೆ ಈ ದಿನ ಹಾಗೆ ಕೇಳಲು ಯಾರೂ ಬರಲಿಲ್ಲ.

"ಕತ್ತಲಾಯ್ತು" ಎಂದು ರಂಗಮ್ಮ ತಮಗೆ ತಾವೇ ಅಂದುಕೊಂಡರು. ಮೆಲ್ಲಗೆ ತಮ್ಮ ಮನೆಗೆ ಹೋಗಿ ದೀಪ ಹಾಕಿದರು. ಅಲ್ಲಿ ಇದ್ದದ್ದು ಮಂದವಾದ ವಿದ್ಯುದ್ದೀಪ- ಮನೆಗೊಂದರಂತೆ.

ಆದರೆ ವರಾಂಡದ ಹದಿನಾಲ್ಕನೆಯ ಮನೆಯಲ್ಲಿ ಯಾರೂ ಗುಂಡಿ ಒತ್ತಲಿಲ್ಲ. ಅಲ್ಲಿ ನಾರಾಯಣಿ ಮಲಗಿದ್ದ ಕಡೆ, ತಲೆಯ ದಿಕ್ಕಿನಲ್ಲಿ ಒಂದು ಹಣತೆ ಉರಿಯುತ್ತಿತ್ತು[1]

ಮನೆ ಬೆಳಗುವ ಗೃಹಿಣಿ ಅಲ್ಲಿರಲಿಲ್ಲ.

---

[1] ಸತ್ತವರು ಮಲಗಿದ್ದ ಕಡೆ ದೀಪ ಇಡುವುದು ವಾಡಿಕೆ. ಕೆಲವರು ಹದಿನೈದು ದಿನ ದೀಪ ಇಡುತ್ತಾರೆ.

ಆಳ	Depth
ಕೊಡ	Pot
ಕೊಳ್ಳಾಯಿ	Faucet
ಗುಂಡಿ	Button
ಗೃಹಿಣಿ	Mistress of the house.
ಉಚಿತ	Free
ಧ್ವನಿ	Sound (voice)
ಧರ್ಮಾವರದ ಸೀರೆ	A kind of pure Silk saree (South Indian)
ನೆಮ್ಮದಿ	Peace
ಬೀಗ	Lock
ಮಂದ	Dim
ಮುಳುಗು	Drown
ವಿದ್ಯುದ್ದೀಪ	Electric light
ಲೆಕ್ಕಾಚಾರ	Account
ಹಣತೆ	Oil lamp

ಶಿವರಾಮ ಕಾರಂತ, 1902—

ಶಿವರಾಮ ಕಾರಂತರು 1902ನೇಯ ಇಸವಿ ಜನವರಿ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಎಂಬ ಊರಿನಲ್ಲಿ ಹುಟ್ಟಿದರು. ಅವರದು ಸಾಂಪ್ರದಾಯಿಕ ಬ್ರಾಹ್ಮಣ ಮನೆತನ. ಆದರೆ ಕಾರಂತರ ನೋಟ ಸಾಂಪ್ರದಾಯಿಕವಲ್ಲ. ಮೌಲ್ಯಗಳನ್ನು ಅನುಭವಿಸಿ ನೋಡಿದರೆ ಮಾತ್ರ ಅವು ಪ್ರಯೋಜನ ಎಂದು ಕಾರಂತರು ನಂಬಿದ್ದಾರೆ. ತಮಗೆ ಸರಿ ಎಂದು ತೋರಿದುದನ್ನು ಆಚರಣೆಯಲ್ಲಿ ತರಲು ಅವರು ಮಾಡಿದ ಪ್ರಯತ್ನಗಳನ್ನು ತಮ್ಮ ಆತ್ಮಚರಿತ್ರೆ *ಹುಚ್ಚು ಮನಸ್ಸಿನ ಹತ್ತು ಮುಖಗಳು* ಎಂಬ ಪುಸ್ತಕದಲ್ಲಿ ಚಿತ್ರಿಸಿದ್ದಾರೆ.

ಇಂಡಿಯಾದ ಅನೇಕ ಸಾಹಿತಿಗಳಂತೆ ಕಾರಂತರು ಕೂಡ ಗಾಂಧಿಯವರ ಪ್ರಭಾವಕ್ಕೆ ಒಳಗಾದರು.

ಗಾಂಧಿ ತತ್ವಗಳ ಪ್ರಕಾರ ಒಂದು ಆಶ್ರಮವನ್ನು ಸ್ಥಾಪಿಸಿ ಕೆಲವು ವರ್ಷಗಳ ಕಾಲ ಅದನ್ನು ನಡೆಸಿದರು. ಆದರೆ ಅವರು ರಾಜಕೀಯದಲ್ಲಿ ಹೆಚ್ಚು ಭಾಗವಹಿಸಲಿಲ್ಲ.

ಕಾರಂತರು ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಪ್ರಯೋಗ ಮಾಡಿದ್ದಾರೆ. ಆದರೆ ಅವರ ಕಾದಂಬರಿಗಳು ಅವರ ಇತರ ಪುಸ್ತಕಗಳಿಗಿಂತ ಮುಖ್ಯ. ಚೋಮನ ದುಡಿ, ಬೆಟ್ಟದ ಜೀವ, ಮರಳಿ ಮಣ್ಣಿಗೆ, ದೇವ ದೂತರು, ಮುಗಿದ ಯುದ್ಧ, ಮೊಗ ಪಡೆದ ಮನ, ಗೊಂಡಾರಣ್ಯ ಇವು ಇವರ ಕೆಲವು ಕಾದಂಬರಿಗಳು. ಚೋಮನ ದುಡಿಯನ್ನು ಸಾಹಿತ್ಯ ಅಕಾಡೆಮಿ ಇಂಡಿಯಾದ ಇತರ ಭಾಷೆಗಳಿಗೆ ಭಾಷಾಂತರ ಮಾಡಿಸಿದೆ. ಈ ಕಾದಂಬರಿಯಲ್ಲಿ ಕಾರಂತರು ಹರಿಜನರ ಆರ್ಥಿಕ ಸ್ಥಿತಿ, ಮನಸ್ಸಿನ ಸ್ಥಿತಿ, ಮೂಢ ನಂಬಿಕೆಗಳನ್ನು ಚಿತ್ರಿಸಿದ್ದಾರೆ. ಇದು ಸಮಾಜ ಶಾಸ್ತ್ರದ ವಿದ್ಯಾರ್ಥಿಗೆ ಕೂಡ ಮುಖ್ಯವಾದ ಪುಸ್ತಕ.

ಮರಳಿ ಮಣ್ಣಿಗೆ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಬಡ ಸಂಸಾರದ ಚಿತ್ರ. ಶತಮಾನಗಳಿಂದ ಬಂದ ಸಂಪ್ರದಾಯದ ಮೇಲೆ ಇಂದಿನ ನಾಗರಿಕತೆ ಮಾಡುವ ಪರಿಣಾಮ ಕಾದಂಬರಿಯ ಮುಖ್ಯ ವಸ್ತು. ಮನುಷ್ಯ ತಾನು ಬೆಳೆದು ಬಂದ ಸಂಸ್ಕೃತಿಯಲ್ಲಿ ಮಾತ್ರ ಪೂರ್ಣ ತೃಪ್ತಿ ಪಡೆಯುತ್ತಾನೆ ಎಂಬ ಭಾವನೆ ಈ ಕಾದಂಬರಿಯಲ್ಲಿದೆ. ಈ ಕಾದಂಬರಿ ಕೂಡ ಇಂಡಿಯಾದ ಕೆಲವು ಭಾಷೆಗಳಿಗೆ ಭಾಷಾಂತರವಾಗಿದೆ. ಎ. ಎನ್. ಮೂರ್ತಿರಾಯರು ಇದನ್ನು Return to the Soil ಎಂದು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.

ಬೆಟ್ಟದ ಜೀವ ಬಹುಷಃ ಕಾರಂತರ ಅತ್ಯುತ್ತಮ ಕಾದಂಬರಿ. ಹಿಂದೂ ಸಮಾಜ ಜಾತಿಗಳಾಗಿ ಹಂಚಿಹೋಗಿದ್ದರೂ ಅವರಲ್ಲಿ ಮಾನವೀಯತೆಯಿದೆ ಎಂದು ತೋರಿಸುತ್ತದೆ. ಅವರ ಗರ್ಭಗುಡಿ, ದೇವದೂತರು ಮುತ್ತು

ಸೌಂದರ್ಯ ವಿಡಂಬನೆಗಳು.

ಆದರೆ ಕಾರಂತರು ಕೇವಲ ಸಾಹಿತಿಗಳಲ್ಲ. ಲಲಿತ ಕಲೆಗಳ ವಿಚಾರವಾಗಿ ಭಾರತೀಯ ಚಿತ್ರಕಲೆ ಮತ್ತು ಕಲೆಯ ದರ್ಶನ ಬರೆದಿದ್ದಾರೆ. ಅವರ ಯಕ್ಷಗಾನ ಬಯಲಾಟ ಕೂಡ ನಾಟಕ, ಸಂಗೀತದ ಬಗ್ಗೆ ಬರೆದ ಪುಸ್ತಕ. 1937 ರಲ್ಲಿ ಕಾರಂತರು ಮಕ್ಕಳಿಗಾಗಿ ಬಾಲ ಪ್ರಪಂಚ ವನ್ನು ಬರೆದರು. ಅದರಲ್ಲಿ ಮನುಷ್ಯನ ಇತಿಹಾಸ, ಬೇರೆ ಬೇರೆ ದೇಶಗಳ ಸಂಸ್ಕೃತಿ, ಭೂಗೋಳ, ವಿಜ್ಞಾನ ಮೊದಲಾದ ವಿಷಯಗಳನ್ನು ಸಣ್ಣ ಹುಡುಗರಿಗೆ ಕೂಡ ತಿಳಿಯುವಂತೆ ಬರೆದಿದ್ದಾರೆ.

ಕಾರಂತರು ಯಾವ ವಿಚಾರದ ಬಗ್ಗೆ ಬರೆಯಲಿ ಅವರು ಉಪಯೋಗಿಸುವ ಭಾಷೆ ತಮ್ಮ ಸುತ್ತಲಿನ ಜನ ಆಡುವ ಭಾಷೆಯಿಂದ ದೂರ ಹೋಗುವುದಿಲ್ಲ. ಯಾವ ದೃಷ್ಟಿಯಿಂದ

ನೋಡಿದರೂ ಕಾರಂತರನ್ನು ಬುದ್ಧಿಜೀವಿ ಎಂದು ಕರೆಯಬಹುದು.

ಕಾರಂತರು ಕನ್ನಡ ಸಾಹಿತ್ಯ ಸಂಪತ್ತಿನ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದಾರೆ. ಅವರು ಇಂಡಿಯಾದ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದಾರೆ. ಅವರು ಕನ್ನಡದ ಬಹಳ ಮುಖ್ಯ ಸಾಹಿತಿ.

ಅತ್ಯುತ್ತಮ	The best
ಆಚರಣೆ	Practice
ಆತ್ಮ ಚರಿತ್ರೆ	Auto biography
ಆರ್ಥಿಕ	Economic
ಆಶ್ರಮ	Hermitage
ಗರ್ಭ ಗುಡಿ	Sanctum
ಕಾಂತಾರಣ್ಯ	Jungle
ತತ್ವ	Principle
ಚಿತ್ರಕಲೆ	Painting
ದುಡಿ	Drum
ದೇವ ದೂತ	God's messenger
ನಾಗರಿಕತೆ	Civilization
ನಿಲುವು	Out look
ತೃಪ್ತಿ	Satisfaction
ಪರಿಣಾಮ	Result, consequence
ಪ್ರಯೋಜನ	Use
ಪ್ರಕಾರ	Form
ಭಾವನೆ	Concept
ಬಯಲಾಟ	Folk drama

ಬಾಲ ಪ್ರಪಂಚ	The world of the children
ಬುದ್ಧಿ ಜೀವಿ	Intellectual
ಭೂಗೋಳಶಾಸ್ತ್ರ	Geography
ಮತ್ತೆ	Once again
ಮನ	Mind
ಮೊಗ	Face
ಮೂಢ ನಂಬಿಕೆ	Blind faith or belief
ಮೌಲ್ಯ	Value
ಯಕ್ಷಗಾನ	Folk opera
ಲಲಿತ ಕಲೆ	Fine arts
ವಿಜ್ಞಾನ	Science
ಹಂಚು	Divide

ಮರಳಿ ಮಣ್ಣಿಗೆ ಶಿವರಾಮ ಕಾರಂತ

(ಆಧಾರ) ಪುಟ 271-272

ಸ್ವಲ್ಪ ಹೊತ್ತಿನೊಳಗೆ ಒಳಗಿಂದ ಕಾಫಿ, ಹೆಸರು ಗಂಜಿ, ಎಣ್ಣೆಯಲ್ಲಿ ಕರಿದ ಹಪ್ಪಳಗಳು ಬಂದುವು. ಅವರೊಡನೆ ವಕೀಲರೂ ಕುಳಿತರು. "ನೋಡಿದಿರಾ ಐತಾಳರೇ, ಹಳೆಯ ಕಾಲ ಹೋಗಿಯೇ ಹೋಯಿತು – ಎಂಬುದಕ್ಕೆ ನಿಮ್ಮ ಮಗ ಸಾಕ್ಷಿ. ಕಾಫಿ ಕುಡಿಯಲು ಶುರು ಮಾಡಿದ್ದಾನೆ. ನನಗೆ ಪ್ರತಿದಿನ ಕಾಫಿ ಇಲ್ಲದಿದ್ದರೆ ಆಗುವುದಿಲ್ಲ" ಎಂದರು. ಐತಾಳರು "ನೀವು ವಕೀಲರು, ಕಾಫಿ ಕುಡಿಯುವುದು ಸರಿ. ಪೇಟೆಯ ಜನಕೆ ಕಾಫಿ ಬೇಕಾಗಬಹುದು. ಆದರೆ ನಮ್ಮೂರಿನ ಜನಕ್ಕೆ ಅದು ಯಾಕೆ? ಈ ಬೆಂಗಳೂರಿನ ಗಾಳಿ ಬೀಸಿ, ಶೀನ ಮಯ್ಯರಂಥ ಮುದುಕರು ಕೂಡ ಕಾಫಿ ಕುಡಿಯುತ್ತಾರೆ" ಎಂದರು. ಸ್ವಲ್ಪ ಹೊತ್ತು

ಶೀನ ಮಯ್ಯರ ವಿಚಾರ ಮಾತಾಡಿದರು. ಅವರ ಮಕ್ಕಳ ಸಂಪಾದನೆಯ ವಿಚಾರ ಕೂಡ ಮಾತಾಡಿದರು. ಅವರ ಹಾಗೆ ಹೋಟೇಲಿನಿಂದ ಹಣ ಗಳಿಸಿದ ಇನ್ನೂ ನಾಲ್ಕು ಜನರ ವಿಚಾರ ಮಾತಾಡಿದರು. ವಕೀಲರು "ಈ ವಕಾಲತ್ತು ನೋಡಿ, ಯಾರು ಕೇಸು ಕೊಡುತ್ತಾರೆ ಎಂದು ಕಾಯುವುದಕ್ಕಿಂತ ಆ ಕೆಲಸ ಒಳ್ಳೆಯದು" ಎಂದರು.

ಐತಾಳರು "ಹೌದು, ನೋಡಿ ನಮ್ಮ ಸುಬ್ರಾಯ ಈ ವರ್ಷ ಮನೆಗೆ ಹಂಚು ಹಾಕಿಸುತ್ತಾನಂತೆ. ಅವನಿರುವುದು ಕುಂದಾಪುರದಲ್ಲಿ ಸಣ್ಣ ಗುಡಿಸಿಲ ನಂತಹ ಹೋಟೇಲು" ಎಂದರು. ಈಗ ತಮ್ಮ ಜಾತಿಯವರ ಹೋಟೇಲು ಕುಂದಾಪುರದಲ್ಲಿದೆ ಎಂದು ವಕೀಲರಿಗೆ ಸಂತೋಷ ಆಯಿತು.

ಮಧ್ಯಾನ್ಹದ ಊಟ ಇಲ್ಲಿ ಮಾಡಿ ಎಂದು ವಕೀಲರು ಪೆತಾಳ್ಕರಿಗೆ ಹೇಳಿದರು. ಪೆತಾಳ್ಕರು ಆತುರವಾಗಿ "ವಕೀಲರು ನಮ್ಮ ಹುಡುಗ ಮುಂದಕ್ಕೆ ಓದಬೇಕೋ ಬೇಡವೇ ಹೇಳಲಿಲ್ಲ?" ಎಂದರು. ಮುಂದಿನ ಸಂಗತಿಯನ್ನು ನಿರ್ಧರಿಸಲು ಮಗನನ್ನು ಮಾತಾಡಿಸಬೇಕು. ಆದರೆ ಅವನು ಮಾತಾಡುತ್ತಿರಲಿಲ್ಲ. ವಕೀಲರು ಹಿನಿಗೆ ತಂದೆ ಇರುವುದರಿಂದ ಅವನು ಮಾತಾಡುತ್ತಿಲ್ಲ ಎಂದು ಇಂಗ್ಲಿಷಿನಲ್ಲಿ ಮಾತಾಡಿಸಿದರು. "You are in the Matriculation class" ಎನ್ನಲು "Yes" ಎಂಬ ಉತ್ತರ ಬಂತು. ಮುಂದೆ ಮಾತುಗಳೆಲ್ಲ ಇಂಗ್ಲಿಷಿನಲ್ಲಿ ನಡೆದುವು. ಊಟಕ್ಕೆ ಕುಳಿತಾಗ ಊ ವಕೀಲರೊಡನೆ "ಯೆಸ್- ಯೆಸ್"- ಮಾಡಿದನಂತೆ. ಅಪ್ಪನಿಗೆ ಆ ಮಾತು ಬೇಕಿರಲಿಲ್ಲ. ವಕೀಲರ ಹಿರಿಯ ಮಗ, ತನ್ನ

ವಯಸ್ಸಿನ ಪೀತಾಂಬರನೊಡನೆ ಮಾತಾಡಬೇಕೆಂದು ಅವನಿಗೆ ಆಸೆ. ತಾವು ಮನೆಗೆ ಬಂದಾಗ ಕಂಡ ಹುಡುಗಿಯನ್ನು ಮತ್ತೆ ನೋಡಬೇಕು ಎಂದು ಆಸೆ. ಆದರೆ ವಕೀಲರ ಪ್ರಶ್ನೆಗಳು ಎರಡಕ್ಕೂ ಉತ್ತರ ಹೊಳಲಿಲ್ಲ.

ಊಟವಾದ ಬಳಿಕ ಅವನು ಅವರಿಂದ ಮರೆಯಾದನು. ಮನೆಗೆ ಬಂದ ಈ ಇಂಗ್ಲಿಷ್ ವೀರನನ್ನು ಮಾತನಾಡಿಸಲು ಪೀತಾಂಬರನು ಸಿದ್ಧನಾದನು. ಅವರು ಮಾತನಾಡುತ್ತ ಅಟ್ಟಕ್ಕೆ ಹೋದರು. ವಕೀಲರು ಪೀತಾಂಬರರೊಡನೆ "ಹುಡುಗ ಚುರುಕಿದ್ದಾನೆ. ಅವನಿಗೆ ಇಂಗ್ಲಿಷ್ ಚೆನ್ನಾಗಿ ಬರುತ್ತದೆ. ಪಾಸಾದರೆ ಕಾಲೇಜಿಗೆ ಕಳಿಸಿ" ಎಂದರು. ಪೀತಾಂಬರರು ಬಡತನ

ವಿವರ ಕೇಳಿದರು. ಅಲ್ಲಿ ಎಲ್ಲರುವುದು, ಹೋಟೇಲಿನಲ್ಲೇನು ಎಂದು ಅವರನ್ನು ಕೇಳಿದರು. "ಹೋರಟ ಮೇಲೆ ಅದನ್ನು ನಿರ್ವಂತ ಮಾಡಿದರೆ ಆಗುವುದಿಲ್ಲವೇನು? ತಿಂಗಳಿಗೆ ಒಂದು ಮೂವತ್ತು ರೂಪಾಯಿ ಕೊಡಲಿಕ್ಕೆ ನಿಮಗೆ ಶಕ್ತಿಯಿಲ್ಲವೇನು?" ಎಂದು ವಕೀಲರು ಕೇಳಿದರು. ಪಿಶಾಳ್ಯರು ಬಡತನ ನಟಿಸಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ವಕೀಲರು "ಪಿಶಾಳ್ಯರೇ, ನಿಮ್ಮ ಮಗನ ಜಾತಕ ಕಳುಹಿಸಿ. ಇಲ್ಲದಿದ್ದರೆ ನೀವು ನಮ್ಮ ನಾಗವೇಣಿಯ ಜಾತಕವನ್ನು ತೆಗೆದುಕೊಂಡು ಹೋಗಿ" ಎಂದರು. ಪಿಶಾಳ್ಯರಿಗೆ ಏನು ಹೇಳಬೇಕು ತಿಳಿಯಲಿಲ್ಲ. ವಕೀಲರು "ಏಕೆ ಮಾತಿಲ್ಲ?" ಎನ್ನಲು

"ನಿಮ್ಮಂಥವರಿಗೆ ವೈದಿಕರಿಂದ ಹುಡುಗನೇ" ಎಂದರು.

"ಅದೆಲ್ಲ ಹಿಂದಿನ ಕಾಲಕ್ಕಾಯಿತು. ಈಗ ಇಂಗ್ಲಿಷ್ ಬಂದರೆ ಆಯಿತು. ಬೇರೆ ಪುರಾಣ ಯಾರು ಕೇಳುತ್ತಾರೆ? ಈಗ ನಿಮ್ಮ ಹುಡುಗನಿಗೆ ನಮ್ಮ ಹುಡುಗಿಯ ಜಾತಕ ಹೊಂದಿದರೆ ಮದುವೆ ಆಗಬಾರದೇನು?" ಎಂದರು.

ಆಚಾರ್ಯರು ಸಂತೋಷ ತೋರಿಸಿದರು.

ಅಟ್ಟ	Attic
ಆತುರ	Eagerness, haste.
ಕರಿ	Deep fry
ಕಿಸ್ ಪಿಸ್	Imitation of English Sounds.
ಕಾಯು	Wait
ಗಳಿಸು	Earn
ಗುಡಿಸಲು	Hut
ಗಾಳಿ ಬೀಸು	By the influence of
ಚುರುಕು	Sharp
ನಟಿಸು	Pretend
ನಿರ್ಣಯ	Decision
ನಿರ್ಧರಿಸು	Decide
ಬಳಿಕ	After
ವಕಾಲತ್ತು	Lawyer's profession. Defence
ವೈದಿಕ	Orthodox
ವಿವರ	Detail

ಸಂಪಾದನೆ	Income
ಸಾಕ್ಷಿ	Witness
ಹಪ್ಪಳ	Wafers
ಹವೆ	Climate
ಹೆಸರು ಗಂಜಿ	Porridge of a kind of lentils
ಹೆಂಚು	Tile
ಹೊಂದು	Agree

ಪಂಪ

ಪಂಪ ಹತ್ತನೆಯ ಶತಮಾನದ ಕನ್ನಡದ ಕವಿ. ಅವನ ತಂದೆ ಬ್ರಾಹ್ಮಣ ಮತವನ್ನು ಬಿಟ್ಟು ಜೈನ ಮತಕ್ಕೆ ಸೇರಿದನು. ಪಂಪ ಚಾಲುಕ್ಯರಾಜ ಅರಿಕೇಸರಿಯ ಆಸ್ಥಾನದಲ್ಲಿದ್ದ. ಅವನ ಮೊದಲನೆಯ ಕಾವ್ಯ ಆದಿ ಪುರಾಣ. ಅದರ ಕಥಾವಸ್ತು ಜೈನರ ಗುರುವಾದ ಆದಿ ತೀರ್ಥಂಕರನ ಜೀವನ.

ಕೆಲವು ಪಂಡಿತರು ಕನ್ನಡದಲ್ಲಿ ಯಾರೂ ಭಾರತವನ್ನು ಬರೆದಿಲ್ಲ, ನೀನು ಬರೆ ಎಂದು ಪಂಪನಿಗೆ ಹೇಳಿದರಂತೆ. ರಾಜ ಅರಿಕೇಸರಿ ನನ್ನ ಕೀರ್ತಿಯನ್ನು ಒಂದು ಕಾವ್ಯದಲ್ಲಿ ನಿಲ್ಲಿಸಬೇಕು

ಎಂದು ಕೇಳಿಕೊಂಡ. ಆದ್ದರಿಂದ ಪಂಪ ಅರ್ಜುನನನ್ನು ನಾಯಕನನ್ನಾಗಿ ಮಾಡಿ ಭಾರತವನ್ನು ವಿಕ್ರಮಾರ್ಜುನ ವಿಜಯ ಎಂಬ ಹೆಸರಿನಿಂದ ಬರೆದ. ತನ್ನ ರಾಜ ಮತ್ತು ಪ್ರೋತ್ಸಾಹಕನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸುತ್ತಾನೆ.

ತಾನು ಜೈನನಾದರೂ ವ್ಯಾಸನ ಭಾರತದ ಕಥೆ ಉಳಿಯು ಮೀರಿ ತನ್ನ ಭಾರತವನ್ನು ಪಂಪ ಬರೆದ. ವಿಕ್ರಮಾರ್ಜುನ ವಿಜಯವನ್ನು ಓದುವಾಗ ಪಂಪ ವೈದಿಕ ಮತದವನಲ್ಲ, ಜೈನ ಎಂದು ಯಾರಿಗೂ ಅನಿಸುವುದಿಲ್ಲ.

ವಿಕ್ರಮಾರ್ಜುನ ವಿಜಯದ ಗುರಿ ಧರ್ಮವನ್ನು ಪ್ರಚಾರ ಮಾಡುವುದಲ್ಲ. ಆದ್ದರಿಂದ ಸಂಸ್ಕೃತ ಭಾರತ-

ದಲ್ಲಿ ಬರುವ ಭಗವದ್ಗೀತೆ ಪಂಪ ಭಾರತದಲ್ಲಿ ಹೆಚ್ಚು ಮುಖ್ಯವಲ್ಲ. ಅರ್ಜುನನ ಸಾಹಸ, ಕರ್ಣನ ಸಾಹಸ ಇವು ಹೆಚ್ಚು ಮುಖ್ಯ.

ಪಂಪ ಭಾರತದ ನಾಯಕ ಅರ್ಜುನನಾದರೂ ಕರ್ಣನ ಪಾತ್ರಕ್ಕೆ ಪಂಪ ಬಹಳ ಗಮನ ಕೊಟ್ಟಿದ್ದಾನೆ. ಕರ್ಣನ ಹಿರಿಯ ಗುಣಗಳನ್ನು ಮೆಚ್ಚಿ ಭಾರತದಲ್ಲಿ ಯಾರನ್ನಾದರೂ ನೆನೆಯಬೇಕಾದರೆ ಕರ್ಣನನ್ನು ನೆನೆ ಎಂದು ಹೇಳುತ್ತಾನೆ.

ವಿಕ್ರಮಾರ್ಜುನ ವಿಜಯ ಕನ್ನಡ ಸಾಹಿತ್ಯದಲ್ಲಿ ಬಹಳ ಮುಖ್ಯವಾದ ಗ್ರಂಥ. ಕತೆ ಹೇಳುವ ರೀತಿ, ಭಾಷೆಯ ಬಿಗಿ, ಪಾತ್ರ ಸೃಷ್ಟಿ ಈ ಎಲ್ಲ ದೃಷ್ಟಿಗಳಿಂದ ಈ ಗ್ರಂಥ ಉತ್ತಮವಾಗಿದೆ.

ಆದ್ದರಿಂದ ಪಂಪನನ್ನು ಆದಿಕವಿ, ಕವಿ ಸಾರ್ವಭೌಮ ಎಂದು ಕರೆಯುತ್ತಾರೆ.

ಅನಿಸು	Feel
ಕಥಾವಸ್ತು	Subject matter
ಚಾಲುಕ್ಯ	Kannada dynasty of IXth Century A.D.
ನೆನೆ	Remember
ಬಿಗಿ	Compression (tightness)
ಸಾಹಸ	Adventure
ಸೃಷ್ಟಿ	Creation
ಸಾರ್ವಭೌಮ	Emperor
ಹೋಲಿಸು	Compare

ಪಂಪನ ವಿಕ್ರಮಾರ್ಜುನ ವಿಜಯದ ಆಧಾರದ ಮೇಲೆ

ಸೇನಾಧಿಪತ್ಯ

[ಸಂಧಿಯ ಮಾತು ಮುರಿಯಿತು. ಕೌರವ ಸೈನ್ಯಕ್ಕೆ ಭೀಷ್ಮಾಚಾರ್ಯ ಸೇನಾಧಿಪತಿಯಾಗ ಬೇಕೆಂದು ದ್ರೋಣಾಚಾರ್ಯ ಸೂಚಿಸಿದ. ದುರ್ಯೋಧನ ಆ ಮಾತಿಗೆ ಒಪ್ಪಿದ.]

ಭೀಷ್ಮಾಚಾರ್ಯನನ್ನು ಸೇನಾಧಿಪತಿಯನ್ನಾಗಿ ಮಾಡಿ ತನ್ನ ಹಗೆಗಳನ್ನು ತನ್ನ ಮುಂಜದ ಕಾಲಿಗೆ ಕಟ್ಟಿದೆ ಎಂದು ತಿಳಿದ ದುರ್ಯೋಧನನಿಗೆ ಕರ್ಣನು ಹೀಗೆ ಹೇಳಿದನು:

"ಇವರ ಹಿರಿಮೆ ಹಿಂದಿನ ಕತೆ. ಈ ಹಿರಿಯರನ್ನು ಯುದ್ಧಕ್ಕೆ ಕಳುಹಿಸಿ ಹಗೆಗಳು ನಗುವಂತೆ ಮಾಡುವು-

ದರಿಂದ ಏನಾಗುತ್ತದೆ? ಕರ್ಣ್ಣ ಕಾಣಾದ' ಈ ಮುದುಕರು ಹುಲ್ಲು ಕಟ್ಟಿದ ದಂಟಿನ ಬಿಲ್ಲಿನ ಹಾಗೆ. ಹಗೆಗಳ ಬೆನ್ನೆಲುಬನ್ನು ಮುರಿಯಬೇಕಾದರೆ ನನಗೆ ಸೇನಾಧಿಪತ್ಯವನ್ನು ಕೊಡು.

ಜೊತೆಗೆ ಭೀಷ್ಮಾಚಾರ್ಯರು ಹಿಂದೆ ಪಾಂಡವರನ್ನು ಆದರದಿಂದ ಸಾಕಿದವರು. ಆದ್ದರಿಂದ ಇವರು ಪಾಂಡವರೊಡನೆ ಕಾದುವುದಿಲ್ಲ. ನೀನು ಇವರನ್ನು ಹೇಗೆ ನಂಬುತ್ತೀಯೆ?"

ಕರ್ಣನ ಈ ಮಾತಿಗೆ ಸಿಟ್ಟಾಗಿ ದ್ರೋಣಾಚಾರ್ಯರು ಹೀಗೆ ಹೇಳಿದರು:

" ಭೀಷ್ಮರ ಮುಪ್ಪು ಸಿಂಹದ ಮುಪ್ಪಿನಂತೆ. ವಯಸ್ಸಾದರೂ ಕೂಡ ಸಿಂಹ ಸಿಂಹವೇ. ಕರ್ಣ,

ಹುಡುಗಳ ನೈಪುಣ್ಯ ಕಾಡಾನೆಗಿಂತ ಹೆಚ್ಚೇನು?

ಒಳ್ಳೆಯ ಕುಲದಲ್ಲಿ ಹುಟ್ಟಿದವರನ್ನು, ಶೂರರನ್ನು, ಹಿರಿಯರನ್ನು, ಈ ಸಭೆಯಲ್ಲಿ ಮದದಿಂದ ಹೀನಾಯಿಸಿದೆ. ನಿನ್ನ ಮಾತು ನಿನ್ನ ಕುಲವನ್ನು ಹೊರಗೆಡಹುತ್ತದೆ."

ದ್ರೋಣನ ಈ ಮಾತನ್ನು ಕೇಳಿ ಸಿಟ್ಟಾಗಿ ಕರ್ಣನು ಹೇಳಿದನು:

"ಎಲ್ಲಕ್ಕೂ ಮೊದಲು ಕುಲದ ವಿಚಾರವನ್ನೇ ಮಾತಾಡುತ್ತೀರಿ. ಕುಲ ಕುಲವಲ್ಲ. ಶೀಲವೇ ಕುಲ, ಗುಣವೇ ಕುಲ, ಅಭಿಮಾನವೇ ಕುಲ, ಪರಾಕ್ರಮವೇ ಕುಲ. ಈ ಯುದ್ಧದಲ್ಲಿ ನಿಮ್ಮ ಕುಲಗಳನ್ನು ಅಕುಲಗಳನ್ನಾಗಿ ಮಾಡುತ್ತೇನೆ. ಭೀಷ್ಮರು ಪಾಂಡವ-

ರನ್ನು ಗೆದ್ದರೆ ತಪಸ್ಸಿಗೆ ಹೋಗುತ್ತೇನೆ. ಅವರು ಬದುಕಿರುವವರೆಗೆ ಬಿಲ್ಲನ್ನು ಹಿಡಿಯುವುದಿಲ್ಲ' ಎಂದು ಕರ್ಣನು ಪ್ರತಿಜ್ಞೆ ಮಾಡಿದನು.

ಕರ್ಣನ ಮಾತನ್ನು ಕೇಳಿ ಭೀಷ್ಮಾಚಾರ್ಯರು ಈ ರೀತಿ ಹೇಳಿದರು:

"ಕಲಿತನ, ಯೌವನದ ಉಕ್ಕು, ರಾಜನ ನಂಬಿಕೆ, ತೋಳಿನ ಬಲದ ಹೆಮ್ಮೆ ಇವು ನಿನಗಿವೆ. ನನಗಿದೆಯೇನು? ಯುದ್ಧದಲ್ಲಿ ಅರ್ಜುನ ಎದುರಾಗುತ್ತಾನೆ. ಈಗ ಸುಮ್ಮನೆ ಏಕೆ ಮಾತಾಡುತ್ತೀಯೆ? ನೀನು ಯುದ್ಧ ಮಾಡುವ ಸರದಿ ಬರುತ್ತದೆ.

ಮುದುಕನ ಸಾಮರ್ಥ್ಯದ ವಿಚಾರ ಯೋಚಿಸುತ್ತೀಯೇನು? ತನ್ನ ಚಕ್ರವನ್ನು ಉಪಯೋಗಿಸುವುದಿಲ್ಲ

ಎಂದು ಹೇಳಿದ ಕೃಷ್ಣ ಭಗವಂತನೇ ನ ಹೆದರುವ ಹಾಗೆ ಚಕ್ರವನ್ನು ಹಿಡಿಯುವಂತೆ ಮಾಡುತ್ತೇನೆ. ಅರ್ಜುನನ ರಥ ಯುದ್ಧಭೂಮಿಯಿಂದ ಪಶ್ಚಿಮಕ್ಕೆ ಎಂಟು ಗಾವುದ ಹೋಗುವಂತೆ ಮಾಡುತ್ತೇನೆ. ಯುದ್ಧದಲ್ಲಿ ಹತ್ತು ಸಾವಿರ ಸೈನಿಕರನ್ನು ದಯೆಯಿಲ್ಲದೆ ಕೊಲ್ಲುತ್ತೇನೆ."

ಈ ರೀತಿಯಾಗಿ ಪ್ರತಿಜ್ಞೆ ಮಾಡಿದ ಭೀಷ್ಮನನ್ನು ಅವನ ಪಾಳೆಯಕ್ಕೆ ಕಳುಹಿಸಿ ಮಾರನೆಯ ದಿನ ಯುದ್ಧ ಪ್ರಾರಂಭವಾಗಲಿ ಎಂದು ದುರ್ಯೋಧನನು ಭೇರಿಯನ್ನು ಹೊಡೆಯಿಸಿದನು.

ಅಕುಲ	Casteless
ಅಕ್ಕರ	Affection
ಕಲಿತನ	Heroism
ಕಾದು	To fight
ಕಾಡಾನೆ	Wild elephant
ಗಾವುದ	An ancient measure
ಚಕ್ರ	Wheel - a weapon used by Vishnu
ಛಲ	Determination
ತಪಸ್ಸು	Meditation
ತೋಳ್ಗಳು	Shoulder
ದಂತು	Mercy
ದಂಟು	Reed
ಪರಾಕ್ರಮ	Bravery
ಪಾಳಯ	Camp
ಪ್ರತಿಜ್ಞೆ	Oath

ಭೇರಿ	War drum
ಮದ	Conceit
ಬಿಲ್ಲು	Bow
ಬೆನ್ನೆಲುಬು	Back bone
ಮುಪ್ಪು	Old age
ಯೌವನದ ಉಕ್ಕು	Pride of youth
ಯುದ್ಧ ಭೂಮಿ	War field
ರಥ	Chariot
ಶೂರ	Brave man
ಸಾಕು	Enough
ಸಿಟ್ಟು	Anger
ಸೂಚಿಸು	Suggest
ಸೇನಾಧಿಪತ್ಯ	Command
— ಪತಿ	Cammand-in-chief
ಸರದಿ	Turn
ಸಾಮರ್ಥ್ಯ	Ability
ಹೀನಾಯಿಸು	Humiliate
ಹಗೆ	Enemy
ಹೊರಗೆಡಹು	Bring into open
ಹಿತವರು	Well-wishers